ನು ಕೋಲೆ|| ನೀರಾಜನಾಭಾ ಪಡದಾನು ಪೇಳಾಲು| ಆರಂದ
ಪಡವು ನೋಡಿರಿಕೋಲೆ || ೨೪ || ಮನುಜಾರಂತೀವನೆಂದು|
ದನುಜಾರಿ ತಿಳೀವಾದು| ಗುಣವಂತರೆಲ್ಲಾ ನಿರ್ಲೇಪನೆಂದೂ||
ಗುಣವಂತರೆಲ್ಲಾ ನಿರ್ಲೇಪನೆಂದು ತಿಳಿದು| ಅನುಭೋಗಿಸು
ಸುವರೂ ಅಭಯವ ಕೋಲೆ || ೨೫ ||

|| ಭೈಷ್ಮಿ ಮದುವ್ಯಾದಕಥಾ ||

ಇಂತೀಪರಿವರ್ಣಿಸಿ| ಕುಂತೀ ಸೊಸೆ ಸೂಭದ್ರೆ| ಪಿಂತ್ಯೆತಂ
ದದಕೆ ಪ್ರತಿಮುಂಯ್ಯಕೋಲೆ|| ಪಿಂತ್ಯೆತಂದದಕ ಪ್ರತಿವಹಿಯ್ಯ

ಭೈಷ್ಮ್ಯಪ್ಪೈದ| ಸಂತೋಷ ಕಥೆಯೂ ಬರವೇನು ಕೋಲೆ ||೨೬||
ಲೋಕಾವಾರ್ತೆ ಇದಲ್ಲಾ| ಲೋಕನಾಥನ ಮಾತು| ಬೇಕಾದವರಿಗೆ ಬಲುರುಚಿ ಕೋಲೆ|| ಬೇಕಾದವರಿಗೆ ಬಲು ರುಚಿ ಸತ್ಕಥೆ| ಕಾಕ ಮನುಜರಿಗೆ ಸೊಗಸಾವು ಕೋಲೆ || ೨೭ ||
ಮಾತಾಪಿತ್ರರೊಂದೆನಲು| ಮಾತೂ ಬಿಡುವರು ಪುರುಷ| ನೀತಿಗೆಟ್ಟವಳು ಪರಸತಿ ಕೋಲೆ|| ನೀತಿಗೆಟ್ಟವಳೂ ಪರಸತಿ ಬೊಗಳಲು| ಪ್ರೀತಿಮಾತೆಂದೂ ಹಿಗ್ಗೀರೂ ಕೋಲೆ ||೨೮||
ಧರಿಯೊಳಿಪರಿಪಾಪಿ| ನರರಿಗಿಂದು ಸೊಗಸಿತೆ| ಪರುಮೇಶನ ಧರ್ಮಂಗಳೊಂದು ಕೋಲೆ|| ಸುರಮೇಶನ ಧರ್ಮಂಗಳೊಂದು ಸ್ವಾಮಿಪಾದ| ಕೈಗೀ ಬಿಟ್ಟ್ಯಾರೋ ಇಂತೆಂದು ಕೋಲೆ || ೨೯ ||
ಅಂಮಾ ನಮ್ಮಣ್ಣಗಳು| ತಂದಿದ್ದ ಮುಂಯ್ಯಾವು| ಇಂದೀಗು ತೀರಲಿಲ್ಲ ಭಗವಂತ ಕೋಲೆ|| ಇಂದೀಗೂ ತೀರಲಿಲ್ಲ ಭಗವಂತ ನಿಮಗೀದು| ಛಂದಾವೆ ಜನರೇನು ಅನ್ನಾರೇ ಕೋಲೆ || ೩೦ ||
ಜಾರಾ ಚೋರಾನೆಂದು| ಧಾರುಣೀಯೊಳಗೆಲ್ಲಾ| ನೂರು ನಿಂದೆಯನು ಮಾಳ್ಪರು ಕೋಲೆ|| ನೂರು ನಿಂದೆಯನು ಮಾಳ್ಪರು ಈ ಮಾತು| ನೂರಾವಂದ್ಯಾಕಾಗಬಾರದು ಕೋಲೆ || ೩೧ ||
ಆರಸರಂದ ಮಾತಿಗೆ| ಪರಿಪೂರ್ಣಾನಂದಾಂಬುಧಿ| ಹರಿಮಂದಸ್ಮಿತದಿಂಜವದಿಂದ ಕೋಲೆ|| ಹರಿಮಂದಸ್ಮಿತದಿಂಜವದಿಂದ ವಿಪ್ರರ| ಕರಸೀದ ಮಾಪುತ್ರ ವತಿಗೆ ಸಾಲು ಕೋಲೆ || ೩೨ ||
ದುರ್ಗಾಭುಶ್ರೀ ವಲ್ಲಾಭ| ಭಾರ್ಗವ ವೇದವ್ಯಾಸ| ಗರ್ಗಾಚಾರ್ಯರೆ ಮೊದಲಾದ ಕೋಲೆ|| ಗರ್ಗಾಚಾರ್ಯರೆ ಮೊದಲಾದ ಬಹುಬು

ಷಿ| ವಗರ್ಾವಾರ್ಕ್ಣಣಕೆ ಒದಗೀತು ಕೋೀಲೆ || ೩೩ || ಸುರು
ಗೂರು ಬ್ರಹಸ್ಪತಿ| ತ್ವರದಿಂಪ ಶ್ರೀ ವಿಷ್ಣೀ| ಸ್ವರನಾರ್ಚನಿಯು
ನು ಮಾಡೆಂದು ಕೋೀಲೆ|| ವಿಷ್ಣೀಸ್ವರ ನಾರ್ಚನೆಯು ವಾಡೇದು
ಪೂಜದ್ರವ್ಯಾ ತರಿಸೆಂದು ಪರಿಗೆ ಬಿಸ್ನ್ಯಸಕೋೀಲಿ || ೩೪ ||
ನರಸೀಜನಾಭ| ತನ್ನೆರಿಂದೊಡಗೂಡಿ| ಬೆರಸೀವಂಗಳ
ಸ್ನಾನ ಅಂಬಾರಉಟ್ಟ್ಯಾ || ಬೆರಸಿ ಮಂಗಾಳಸ್ನಾನ ಅಂಬಾರ
ಉಟ್ಟ್ಯ ವಿಷ್ಣೀ| ಸ್ವರನಾ ಪೂಜೆಯುನೂ ಕೈಕೊಂಡ
ಕೋೀಲೆ || ೩೫ || ಮೊರತುಂಬ ಮುತ್ತಿನೊಳಗೆ| ಶಿವಗಣಪತಿ
ಯುನಿಟ್ಟು| ಪರಿ ಪರಿ ಪೂಜಾ ಸಾಧನ ಕೋೀಲೆ|| ಪರಿ ಪರಿ
ಪೂಜಾ ಸಾಧನ ಪ್ರವ್ಯಂಗಾಳ| ತರಿಸೋರಾನೇನೂವರ್ಣಿಸೆ
ಕೊಳೆ || ೩೬ || ಜಿಗಳಿತಂಬಿಟ್ಟು ಕಬ್ಬು| ಮಗಿವಾಂವು ಬಾಳಿ
ತೆಂಗು| ಬಗೆ ಬಾಗೆ ಫಲನೆನಗಡಲೀಯು ಕೋೀಲೆ|| ಬಗೆ
ಬಾಗೆ ಫಲನೆನಗಡಲೀ ಸಮರ್ಪಿಸಿ| ಜಗದೀಶಗಣಪತಿಯು
ಪೂಜೀಸ ಕೋೀಲ || ೩೭ || ನಕ್ಷ್ಯಭಾಂವಿ ರುಗ್ಮಿಣಿ| ಪತ್ತಾರು
ಸಾವಿರ| ಮಿತ್ರೀರು ಗಣಪಗೆ ವಂದೀಸಿಕೊಳೆ| ಮಿತ್ರೀರು
ಗಣಪಾಗೊಂದೀಸಿನಾವಿಂದ| ಅತ್ತೀಗೆಯುರನೂ ಗೆಲಬೇಕು
ಕೋೀಲೆ || ೩೮ || ಪದ ಪದ್ಯ ಗಾಳಿಂದ| ಜದುರವಾಗಿನ
ಳಿಂದ| ಸುಪತಿ ಸೂಭದ್ರಿ ದ್ರಾಪದಿ ಕೋೀಲೆ|| ಸುಪತೀ ಸೂಭ
ದ್ರಿ ದ್ರಾಪದಿಯಾನಿಂದು| ಮುದದಿಂದ ಗೆಲಬೇಕು ಗಣಪತೀ
ಕೋೀಲೆ || ೩೯ || ಕಂತೂ ಮಾತೆಯು ರೇಕಾದಂತಗಿಂತೂ ಪ್ರಾ
ರ್ಥಿಸಿ| ಸಂತೋಷದಿಂದ ಸುಭೋಜಾನ ಕೋೀಲೆ|| ಸಂತೋಷ
ದಿಂದ ಸುಭೋಜಾನ ಮಾಡಿದಾರು| ಅಂತು ಋಷಿಗಳಾ

ಒಡಗೂಡಿ ಕೋಲೆ ||೪೦|| ಕುಂಭಿಣಿ ಸೂರ್ಯಗೆ| ತಾಂಬೂ
ಲಪಾಂತು ಕೊಟ್ಟು| ಸಂಭ್ರಮದಿಂದಾಲೆಲ್ಲಾರು ಕೋಲೆ||
ಸಂಭ್ರಮದಿಂದಾಲೆಲ್ಲಾರು ಕೂಡಿದ| ಪ್ಯಾಂಬಾರಗಳನೂ
ಉಟ್ಟಾರೂ ಕೋಲೆ || ೪೧ || ಸೂರೂತಿ ಕೆಲವಾರು| ಸಾಲಾ
ವಾಳೀ ಪಟವಾಳಿ| ಚಾರು ವಸ್ತ್ರಗಳು ಕೆಲವಾರು ಕೋಲೆ||
ಚಾರುವಸ್ತ್ರಗಳು ಕೆಲವಾರು ಉಟ್ಟಿತುರು ನಾರೇರನೇನೂ
ವರ್ಣಿಸೆ ಕೋಲೆ || ೪೨ || ರಾಕೂಟೀಚಾರಿ ಗೊಂಡೆ| ಹಾ
ಕೀದಚಂದ್ರಸೂರ್ಯ| ನೇಕಾಭರಣವು ಸಾವಾರರುಕೋಲೆ|
ಅನೇಕಾಭರಣವು ಸರ್ವಾರುಧರಿ ಸಾಲು| ನಾಕಾಣಿನೆಲ್ಲಾ
ಚಲ್ಸೀಕಿ ಕೋಲೆ || ೪೩ || ರುಗ್ಮಿಣಿ ಶ್ರೀ ಸತ್ಯ| ವಿಶಾ
ಸಾರಿಯರೆಲ್ಲ ಅಕ್ಷಾನಾವಿಂದೂ ಗೆಲಬೇಕೆ ಕೋಲೆ|| ಅಕ್ಷಾ
ನಾವಿಂದೂ ಗೆಲಬೆ ಕಾಯಸುತಾಲಿ| ಅಕ್ಷಾರದಿಂದ ಸೂತು
ಡೋಗೂ ಕೋಲೆ || ೪೪ || ಕೇರ ಕೇರಿ ಯೊಳೆಲ್ಲ| ನಾರೇರು
ಪುರವಿಂದ| ವಾರಾಣಪುರವಾ ಸಾರಿ ಕಂಡೆವೆಕೋಲೆ| ವಾ
ರಾಣಾಪುರವನಾಳೆ ಕಂಡೆ ವೆಯೆಂದು| ಹಾಸ್ಯನುತಿಪರೂ ಬಲು
ಭಾರೆ ಕೊಲೆ || ೪೫ || ನವಸ್ತ್ರೀಗೆ ಸೋಲುವಾರೆ| ನಿಮ್ಮ ತಂ
ಗೀಯರಾೂ| ಸವಿತ್ರಿಸಿ ರವಗೆ ನಿಜವಾಗಿ ಕೋಲೆ|| ಸಮ್ರಿಸಿ
ರಿವಗೆ ನಿಜವಾಗಿಪುಂದು ಪರ| ಜೊಪಮ್ಮಾನಕೇಳ್ಬಾಳು ರು
ಗ್ಮಿಣಿ ಕೋಲೆ || ೪೬ || ತಲಣೇಯು ವನಾತೆಗೆ ಮುಂ| ಗರು
ಳುತಿದ್ದುತ ಕೃಷ್ಣ| ಕಿಂಗಗೆಯಿಂದಾ ಗೆದ್ದೀವೇ ಗೆದ್ದೀ|| ಕಿಂಸ
ಗೆಯಿಂದ ಗೆದ್ದೀಯೋ ಗೆದ್ದೀಯೆಂದು| ಕರಸೀವ ಸರ್ವಾದೇ
ಶಾವ ಕೋಲೆ || ೪೭ || ಕಾಶೀ ಗುಜ್ಜಾರ ಗೌಡ| ದೇಶಾವೂ

ದಲಾದ ಬಹು| ದೇಶಾದ ಜನರನು ತ್ವರದಿಂದ ಕೋಲೆ|| ದೇ
ಶಾದ ಜನರೂ ತ್ವರದಿಂದ ಬಂದಾರು ಸು| ಕೋಪಾಪ ಮುಂ
ದ್ಯ ನೋಡಾಲು ಕೋಲೆ || ೪೮ || ಪಾಕಶಾಸನಾದಿ|ದಿ|
ವೌಕಾಸರೆಲ್ಲಾರು| ಶ್ರೀ ಕಾಂತನಾಜ್ಞಾಶಿರಸಾವಹಿಸೂತಾ||
ಶ್ರೀಕಾಂತನಾಜ್ಞಾಶಿರಸಾವಹಿಸೂತಾಲಿಅ| ನೇಕಾಸಂದದಲೀ
ಬಂದಾರು ಕೋಲೆ || ೪೯ || ಅಷ್ಟಾದಿಕ್ಪಾಲಕಾರು ಅಷ್ಟೇವೆ
ವಸುಗಾಳು| ಅಷ್ಟವುರುತ್ತುಗಾಳು ಸೂರ್ಯರೂ ಕೋಲೆ||
ಅಷ್ಟುವುರುತ್ತುಗಾಳು ಸೂರ್ಯರು ಬಂದಾರು| ಶ್ರೀಪ್ಟೇಶನಾ
ಜ್ಞಾಬಲಗೊಂಡು ಕೋಲೆ || ೫೦ || ಅತಳಾವಿತಾಳಾದವರು
ಸುತಳಾ ಪಾತಾಳಾದವರು| ಮತಿಲುಳ್ಳಭೂಭುರ್ವ ಸ್ವಲೋಕ
ಕದವರು|| ಮತಿಉಳ್ಳಭೂಭುರ್ವ ಸ್ವಲೋಕದವರೆಲ್ಲಾ| ಚ್ಯು
ತನಾಜ್ಞನಂತೆ ಬಂದಾರು ಕೋಲೆ || ೫೧ || ತೇರಂದಗಾ
ತೇಜೇಯ| ವಾರಾಣವೇರಿ ತಮ್ಮ| ನಾರೇರಾಪತ್ಯರಸಹಿ
ತಾಗಿ ಕೋಲೆ|| ನಾರೇರಾ ಪತ್ಯರಸಹಿತಾಗಿ ಬಂದಾರು| ನಾರಾ
ಯಣನಾಜ್ಞಾಶುಭವೆಂದು ಕೋಲೆ || ೫೨ || ನವಖಂಡ
ದೊಳಗಿಪ್ಪ| ಕವಿಗಾಳೆಲ್ಲಾಗುರುಾಪಿ| ಭುವನೇಶನಾಜ್ಞಾ
ಕೈಕೊಂಡು ಕೋಲೆ|| ಭುವನೇಶನಾಜ್ಞಾ| ಕೈಕೊಂಡು
ದ್ವಾರಕೀಗೆ| ತವಕಾದಿಂವಲ್ಲೀ ಬಂದಾರು ಕೋಲೆ
||೫೩|| ಸತ್ಯಲೋಕಾಧೀಪ| ಪುತ್ರರುಪ್ರವೊಮ್ಮಗ| ಸತ್ಯಾಸಂಕ
ಲ್ಪನ ಸಂಸಾರ ಕೋಲೆ|| ಸತ್ಯಾ ಸಂಕಲ್ಪನಸಂಸಾರ ಈ
ಭಾಗ್ಯ| ಪೃಥ್ವೀಯೊಳಾರಾರಿಗಿಲ್ಲಾವು ಕೋಲೆ || ೫೪ || ಭಾ
ವಾಶುದ್ಧೀಯಲಿಂದ| ಯಾವತ್ತು ಜನಬಂದು| ದೇವಾ
ನಂಘ್ರೀಗೆ ನಮಿಸಾಲು ಕೋಲೆ|| -ದೇವನಂಘ್ರಿಗೆನಮಿಸಾಲು

ಸರ್ವಜ್ಞ। ಸಾವಾಧಾನದಲಿ। ಸಂತೈಸಿಕೋಲೆ ॥ ೫೫ ॥ ಬಂದಾ ಜನರಿಗೆಲ್ಲಾ। ನಂದಾದಿಂದುಣಿಸೂತ। ಯಿಂದು ತೆರಳೀರಿ ಗಜಪೂರಕ್ಕೆಂದು। ಇಂದೂ ತೆರಳಿರಿ ಗಜ ಪುರಕ್ಕೆಂದು ಶ್ರೀ। ಇಂದೀವರಾಕ್ಷನ್ನತೆರಳಾಲು ಕೋಲೆ ॥ ೫೬ ॥ ಗರುಡಾ ಪೀತಾಂಬರೀವ। ಮರುತಾಕಿರೀಟ ವೀವ। ಶಿರಿದೇವಿ ಗಂಧಾವನ ವಾಲಿ ಕೋಲೆ॥ ಶಿರಿದೇವಿಗಂ ಧಾವನವಾಲಿ ಯೀವಾಳು। ಸನಸೀಜಾಸನ ಕಂಸ್ತುಭ ವೀವ ಕೋಲೆ ॥ ೫೭ ॥ ಸೋಮಾ ಸೂರ್ಯರೂ ಕನಡಿ। ಪ್ರೇಮದಿಂ ತೋರುವಾರು। ಶ್ರೀ ಮಾಹದೇವ। ನವವೈಜಯಂತೀ॥ ಶ್ರೀ ಮಾಹದೇವಾನವವೈಜಯಂತಿಯೀವ। ಶ್ರೀವಾರಾತ ಹಾಂ ವೀಗಿಕೊಡುವಾನು ಕೋಲೆ ॥ ೫೮ ॥ ಉರಗಕುಂಡಲವೀವ। ಗರೂಡಾನು ರಥವಾದ। ಪರಮಾ ಪುರುಷನ ಸೌಭಾಗ್ಯ ಕೋಲೆ॥ ಪರಮಪುರುಷನಾ ಸೌಭಾಗ್ಯ ವರ್ಣಿಸಾಲು। ಶಿರಿ ದೇವಿಗರಿಪೂ ಯಂವೆಂದು ಕೋಲೆ ॥ ೫೯ ॥ ರಾಮಾವ್ಯಾಸಾಗೆ ಋಷಿ। ಸ್ತ್ರೀಮಾವೃಂದಾವನಕ್ಕೆ। ಶ್ರೀ ಮನೋರಮನೂ ವಂದೀಸಿ ಕೋಲೆ॥ ಶ್ರೀ ಮನೋರಮನೂ ವಂದೀಸಿ ತೆರಳುವ। ಈ ಮಾಹವಿಡಂಬ ನೋಡಿರಿ ಕೋಲೆ ॥ ೬೦ ॥ ಸತ್ತಿಗಿಪಿಡಿ ವಬಹ್ಮ। ವೃಕ್ಷಾರಿ ಬಟ್ಟಲೀವ। ಎತ್ತೀಚಾಮರನಾಮರು ತಾಸು ಕೋಲೆ॥ ಎತ್ತೀಚಾಮರಾವಾಮರು ತಾಬೀಸೂವ ಪುರುಷೋತ್ತಮನೇನು ವರ್ಣಿಪೆ ಕೋಲೆ ॥ ೬೧ ॥ ಆಶೀ ರ್ವಾದವು ರಾಣಿ।ವಾಸಕ್ಕೆ ಮಾಡಿರೆಂದು ಶ್ರೀ ಸುರ ಗುರುವಿಗೆ ಪೇಳುವ ಕೋಲೆ॥ ಶ್ರೀ ಸುರಗುರುವೀಗೆ

ಪೇಳೂವ ಕೃಷ್ಣಾನು। ಆಸಂತೋಷ। ವೇನು ವರ್ಣಿಸಪೆ ಕೋಲೆ ॥ ೬೨ ॥ ಅಬುಜಾಕ್ಷಿರುಕೀಮಿಣಿ। ಶುಭಲಗ್ನವೀಗ ಬಂತು। ಸೋಬಗೀಲಿ ತೆರಳವ್ವ ಗೆಲುವೆಂದು ಕೋಲೆ॥ ಸೊಬ ಗೀಲಿ ತೆರಳವ್ವಗೆಲುವೆಂದು ಬ್ರಹಸ್ಪತಿ। ಅಭಯೂವಕೊಟ್ಟೊ ಕಳಸೂವಕೋಲೆ ॥ ೬೩ ॥ ಶ್ರೀ ಸತ್ಯಭಾಮಿದೇವಿ। ಈ ಸಮ ಯದಲೀ ಸಾಗು। ಲೇಸಾಗಿಬರುವೆನ್ನ ಸೋಲಿಲ್ಲ ಕೋಲೆ॥ ಲೇಸಾಗಿಬರೂವೆನ್ನಸೋಲಿಲ್ಲವಿಲ್ಲವೆಂದು। ತಾನಾರಿ ಕಳಿಸೀದ ಸುರಗುರು ಕೋಲೆ ॥ ೬೪ ॥ ಐಸತ್ತಾರೂ ಕೋಟೀಯಾ। ದಾವಾರ ಸೈನ್ಯವು। ದೇವಾರ ಮುಂದೆ ನಡದೀತು ಕೋಲೆ॥ ದೇವಾರಮುಂದೆ ನಡದಿತು ಪರದೇಶಾದ। ಯಾವತ್ತು ಸೈನ್ಯ ಮುಂದಾಗಿ ಕೋಲೆ ॥ ೬೫ ॥ ಹತ್ತಾರೂ ಸಾಸೀರದ। ವಿಸ್ತ್ರೀ ಯಾರ ಪಲ್ಲಕ್ಕಿ। ಪ್ರತ್ತ್ಯೇಕ ಪ್ರತ್ತೇಕ ನಡದಾವು ಕೋಲೆ॥ ಪ್ರತ್ತ್ಯೇಕ ಪ್ರತ್ತ್ಯೇಕ ನಡಿದಾಲು ಸಂಪಣಿ। ಪೃಥ್ವೀ ಹಿದಿ ಯುದುವನಿಸೀತು ಕೋಲೆ ॥ ೬೬ ॥ ನಾರೀರೊಬ್ಬೊಬ್ಬರಿಗೆ। ನೂರು ನೂರು ಪುತ್ರರು। ಬ್ಯಾರೆ ಬ್ಯಾರ್ಯಾಗೀ ತೆರಳೋರು ಕೋಲೆ॥ ಬ್ಯಾರೆ ಬ್ಯಾರ್ಯಾಗೀ ತೆರಳೋರವಾರಪೆ ಸರು। ನಾರಾಯಣಾರೆಂದು ಕರಪೋರು ಕೋಲೆ ॥ ೬೭ ॥ ಪಂಡೀ ಪಂಡೆವ ಜವಳಿ। ಭಂಡೀ ಭಂಡಿಲೀ ತುಂಬಿ। ಕುಂಡಾಲ ಪುರಕ್ಕೆ ನಡದಾವು ಕೋಲೆ॥ ಕುಂಡಾಲ ಪುರಕ್ಕೆ ನಡದಾವು ನೋಡಾಲುಭೂ। ಮಂಡಾಲದೊಳಗೆ ಮಿಗಿಲಾಗಿ ಕೋಲೆ ॥ ೬೮ ॥ ಸತ್ಯಾಭಾಂವಿ ರುಗ್ಮೀಣಿ। ಮತ್ತಾರೂ ಮಹಿಷಿ ಯಾರು। ಉತ್ತುಮಂದಣವಾ ಯೇರುತ ಕೋಲೆ॥ ಉತ್ತು

ಮಂದಣವಾ ಯೇರೂತಾನಂದದಿಂದ। ಜತ್ತಾಗ ಬೀಡದೆ ನಡ
ದಾರೂ ಕೋಲೆ ॥ ೬೯ ॥ ಬಲದಲ್ಲಿ ಋಷಿಗಳು। ಕೆಲದಲ್ಲಿ
ಕೊಂಡಾರೂ। ಬಲುದಂಡು ಹಿಂದೆ ಮುಂದಾಗಿ ಕೋಲೆ॥ ಬಲು
ದಂಡು ಹಿಂದೆ ಮುಂದಾಗಿ ಬಲರಾಮ। ಜಲಜಾಕ್ಷ ನಡುವೆ
ಪೋಪಾರು ಕೋಲೆ॥ ೭೦ ॥ ಶ್ರೀ ನಾರದ ಮುನಿಗಾಯನವ
ಮಾಡುವಾನು। ಆ ನಾಕಜಾರೆಲ್ಲ। ಹೂವಿನ ಮಳೆಯಾ॥ಆನಾ
ಕಜರೆಲ್ಲ ಹೂವ್ವಿನ ಮಳೆಗರದಾರು।ಪ್ರಾಣೇಶ ವಿಠಲಾಜಯ
ವೆಂದು ಕೋಲೆ ॥ ೭೧ ॥ ೨೧೭ ॥ ಶ್ರೀ ಮಧ್ವೇಶಾರ್ಪಣ
ಮಸ್ತು ॥

॥ ದೇವರ ಭಕ್ತವಾತ್ಸಲ್ಯ ವರ್ಣನೆ ॥

ಶ್ರೀ ಗುರುಭ್ಯೋನಮಃ ರಾಗ, ಶಂಕರಾಭರಣ ತಾಳ ಆದಿ

ದುಂದುಭಿ ಭೇರಿ ಆ। ನಂದದಿಂಭಾರಿಸೋದೂ। ಛಂದ ಛಂದ
ದಲೀ ಸುರರೆಲ್ಲ ಕೋಲೆ॥ ಛಂದ ಛಂದದಲಿ ಸುರರೆಲ್ಲ ತುಂ
ಬರಾ। ನಿಂದು ಪಾಡುವನೂ ಹರೀಮುಂದೆ ಕೋಲೆ ॥ ೧ ॥
ರಂಭೆ ಊರ್ವಶೀಯರು। ಮುಂಭಾಗದಲ್ಲಿ ಬಂದು। ಸಂಭ್ರ
ಮದಿಂದ ಕುಣೀವಾರು ಕೋಲೆ॥ ಸಂಭ್ರಮದಿಂದ ಕುಣಿವಾ
ರಾಕಾಲಕ್ಕೆ ನಂಬೀನಾಟ್ಯವಾ ಮಾಗಿದಾಗೆ ಕೋಲೆ ॥ ೨ ॥
ಪಿರಿದು ಕೊಂಡಾಡೂವರು। ಹರಿಮುಂದೆ ಭಟರೆಲ್ಲ। ಹಿರೀ
ದಾಗಿ ಮಹಿಮೆ ವಂದೊಂದು ಕೋಲೆ॥ ಹಿರಿದಾಗಿ ಮಹಿಮೆ
ವಂದೊಂದೆ ಕೇಳಾಲು। ಪರಮಾಪಲ್ಲಾ ದಾವಾಕಾದು
ಕೋಲೆ ॥ ೩ ॥ ಶ್ರವಣಾವೆ ಮೊದಲಾದ। ನವವಿಧ ಭಕೂ

ತಿಯ| ತವಕದಿಂ ಕೊಡುವಾ| ಸುಜನರ್ಗೆ ಕೋಲೆ|| ತವ
ಕಾದಿಂ ಕೊಡುವಾ ಸುಜನರ್ಗೆ ಹರಿಯೆಂದು| ಹವಣೀಕಿ
ಯಿಂದ ಹೊಗಳೋರು ಕೋಲೆ || ೪ || ಜೀವೇಶ ವಂದೆ
ವೊದ| ಲೀವಂಭತ್ತು ದ್ವೇಷಾವ| ಕೇವಾಲ ದೈತ್ಯರಿಗೀವೋನು
ಕೋಲೆ|| ಕೇವಲ ದೈತ್ಯರಿಗೀವೋನು ಹರಿಯೆಂದು| ನಾವ
ಧಾನದಲೀ ಹೊಗಳೋರು ಕೋಲೆ || ೫ || ಶ್ರೀ ಶಂಖಚಕ್ರ
ಪೀತ| ವಾಸಾವವಿತ್ಯ್ರಗೆ ಬಿಡುವ| ವಾಸತಿ ಬಿಡುವಾ ಒವ್ರಿತ್ರೀ
ಗೆ ಕೋಲೆ|| ವಾಸತಿಬಿಡುವಾ ಒವ್ರಿತ್ರಗೆ ಸ್ವಾಮಿ ತನ್ನ|
ದಾಸಾರಬಿಡನೆಂಥೊಗಳೋರು ಕೋಲೆ || ೬ || ದೇವಾಧಿ
ಪತ್ಯ ಕೊಡುವ| ಭೋಗ ಭಾಗ್ಯಕೊಡುವ| ಸ್ತ್ರೀ ಸುತ
ರನ್ನ ಕೊಡುವನು ಕೋಲೆ|| ಸ್ತ್ರೀ ಸೂತರನ್ನ ಕೊಡುವನು
ಕೃಷ್ಣ ತನ್ನ| ದಾಸತ್ವಕೊಡನೆಂಥೊಗಳೋರು ಕೋಲೆ || ೭ ||
ಗೃಹಭಕ್ತರೀಗೆ ಬಂದ| ಬಡತಾನ ಸ್ಥಿರವಲ್ಲ| ಕಡುಪ್ರೀತಿಗಳಿ
ಗಿತ್ತ ಸಂಪತ್ತು ಕೋಲೆ|| ಕಡುಪ್ರೀತಿಗಳಿಗಿತ್ತ ಸಂಪತ್ತು
ನಿಲ್ಲವೆಂದು| ದ್ರುಢದಿಂದ ಕೂಗೀ ಹೊಗಳೋರು ಕೋಲೆ
|| ೮ || ರುದ್ರೇಂದ್ರಾದಿಗಳೆಲ್ಲ| ಕದ್ದು ಭಕ್ತೀಮಾಳ್ಪಾರು| ಬು
ದ್ಧಿವಂತಾರು ಭೀಮಸೇನ ಕೋಲೆ|| ಬುದ್ಧಿವಂತಾರು ಭೀಮ
ಸೇನ ದ್ರೌಪದಿ ಶುದ್ಧಾ ಭಕ್ತಾರೆಂದು ಹೊಗಳೋರು
ಕೋಲೆ || ೯ || ಹಿಂಡು ಗಿಡದೋಳು ತುಲಸೀ| ಅಂಡಾಜ
ದೊಳಗೆ ಗರುಡ| ಪುಂಡರೀಕಾಕ್ಷನ ಭಕ್ತರೋಳು ಕೋಲೆ||
ಪುಂಡರೀಕಾಕ್ಷನಭಕ್ತರೋಳಧಿಕಾರ| ಪಾಂಡವರೆಂದು
ಹೊಗಳೋರು ಕೋಲೆ || ೧೦ || ಭಕ್ತಾರಿವಸ್ತ್ರಾ ಭರಣ|

ಭಕ್ತಾರೆ ಅನ್ನ ಉದಕಾ ಭಕ್ತಾರೆಬಂಧೂ ಬಳಗಾವು ಕೋಲೆ॥ ಭಕ್ತಾರೆಬಂಧೂ ಬಳಗಾವು ಸ್ವಾಮಿಗೆಂದು। ಜತ್ತ್ಯುಕ್ತಿ ಕೂಗಿ ಹೊಗಳೋರು ಕೋಲೆ ॥ ೧೧ ॥ ಭಕ್ತಾರುಂಡದ್ದೇ ಊಟ॥ ಭಕ್ತಾರುಟ್ಟದ್ದೇ ಉಡಿಗೆ। ಭಕ್ತಾರೆ ಪಂಚ ಪ್ರಾಣಾರು ಕೋಲೆ॥ ಭಕ್ತಾರೆ ಪಂಚಾ ಪ್ರಾಣಾರು ಹರಿಗೆಂದು ವಿಸ್ತಾರ ದಿಂದ ಹೊಗಳೋರು ಕೋಲೆ ॥ ೧೨ ॥ ವಿಪ್ರಾರೇ ಕುಲದೇವತೆ। ವಿಪ್ರಾರೆ ತಾಯಿ ತಂದೆ। ವಿಪ್ರಾರೆ ಮೂಲ ಗುರುಗಳು ಕೋಲೆ॥ ವಿಪ್ರಾರೆ ಮೂಲಗುರುಗಳು ಹರಿಗೆಂದು। ಕ್ಷಿಪ್ರ ದಿಂದಲ್ಲೇ ಹೊಗಳೋರು ಕೋಲೆ ॥ ೧೩ ॥ ನರಕಾ ಕಂಸ ಹಿರಣ್ಯಾ ಜರಿಜಾರಕಟ ಪಂಚಾರ। ದುರಿಯೋಧನಾದಿ ದೈತ್ಯಾರ ಕೋಲೆ ॥ ದುರಿಯೋಧನಾದಿ ದೈತ್ಯರ ಶಿಕ್ಷಿಸಾಲ। ಹರಿ ಅವತಾರವೆಂದು ಹೊಗಳೋರು ಕೋಲೆ ॥ ೧೪ ॥ ಶಿರಿಇಲ್ಲದೆ ಪಡವ। ಸರುವ ದೇವತೆಗಳು। ತರಿವಾ ದೈತ್ಯರ ನಾಯುಧ ವಿಲ್ಲಾದೆ ಕೋಲೆ॥ ತರಿದ ದೈತ್ಯರನಾಯುಧ ವಿಲ್ಲದೆ ಭಕ್ತ ರ। ಜರಿದೀರ ಲಾರನೆಂದ್ಹೊಗಳೋರು ಕೋಲೆ ॥ ೧೫ ॥ ಶೃತಿ ಗಳು ಹರಿ ಆಜ್ಞಾ। ಸ್ಮೃತಿಗಳ ಹರಿಮಾತು। ಇತರ ಪುರಾಣಾ ಹರಿಲೀಲೆ ಕೋಲೆ॥ ಇತರ ಪುರಾಣಾ ಹರಿಲೀಲೆಯನು ತಾಳಿ। ಅತಿಶಯವಾಗಿಪ್ಪೊಗಳೋರು ಕೋಲೆ ॥ ೧೬ ॥ ನಿನ್ನಾವನೆಂದಾರೇ। ತನ್ನಾನೇ ಕೊಡುವ ಹರಿ। ಅನ್ಯಥ ತಿಳಿವಾ ಅಧಮಾರ ಕೋಲೆ॥ ಅನ್ಯಥ ತಿಳಿವಾ ಅಧಮಾರ ತಮಸಿನೋಳು। ಬನ್ನಾ ಬಡಿಸೂವನೆಂದ್ಹೊಗಳೋರು ಕೋಲೆ

|| ೧೭ || ಸ್ಮರಣೆಮಾತ್ರಕ್ಕೆ ಮೂರು ಪುರವಾ ಪುಕ್ಕಟ
ಕೊಡುವಾ| ದುರ ಳಾ ಮನುಜಾರೇ ಮಹಿಮೇಯು ಕೋಲೆ||
ದುರುಳ ಮನುಜಾರ್‍ಮಹಿಮೇಯು ತಿಳಿಯುದೇ ನಿರಯಾ
ವೈದುವರೆಂಥೊಗಳೋರು ಕೋಲೆ || ೧೮ ||

|| ಶ್ರೀ ಕೃಷ್ಣನ ಸಸೈನ್ಯ ಕರಿಪುರಉದ್ಯಾನವನ || ಪ್ರವೇಶ ವರ್ಣನೆ

ಭೇರೀಶಂಖ ತಾಳ ತು| ತ್ತೂರೀ ಬಜಂತ್ರೀಸೆಂದು ಆರು
ಬಲ್ಲವರಾ ಚಾಮರಾ ಛತ್ರ|| ಆರುಬಲ್ಲವರಾ ಚಾಮರ ಛತ್ರ
ಸಂಖ್ಯಾ| ವಾರಿಧಿಘರಿಯಂತೋಹಾದು ಕೋಲೆ || ೧೯ ||
ಈ ಪರಿ ಇಂದ ಹಸ್ತಿ| ನಾಪುರವ ಕಂಡೀತು| ಶ್ರೀ ಪತಿಸೈನ್ಯ
ಶ್ರೀ ಪ್ರಾಣ ಕೋಲೆ|| ಶ್ರೀ ಪತಿಸೈನ್ಯ ಶ್ರೀ ಪ್ರಾಣದೇವದೂತ|
ವ್ಯಾಪಾರ ಮಾಡುವ ಭರದಿಂದ ಕೋಲೆ || ೨೦ || ವನಜಾ
ನಾಭಾನವರಡು| ವನದಲ್ಲಿ ಇಳಿಯಲು| ವನವರ್ಣವೇನು
ಪೇಳುವಕೋಲೆ|| ವನವರ್ಣವೇನು ಪೇಳುವೆಯುನ್ನ ಬ ದ್ಧಿ
ಗನುಸಾವಷ್ಟೀಗಾ ವರ್ಣೀಪೆ ಕೋಲೆ || ೨೧ || ಸುರ ಹೊನ್ನ
ಪಾರೀಜಾತ| ಹರಿದಾರ ಚಾರಿವಾಳ ಸರಪ ಸಂಪೀಗಿ ಹಲಸು
ಗಿಳಿಮಾಂವು ಕೋಲೆ|| ಸರಸಾ ಸಂಪೀಗಿ ಹಲಸು ಗಿಳಿ
ಮಾಂವು ಅಡಕಿ ತೆಂಗು| ಖರ್ಜೂರಸೂಫವಾಳ ಇಪ್ಪೇಯು||
ಕೋಲೆ || ೨೨ || ತಾಳ ಮತ್ತಿ ಅರಿಷ್ಟ| ಸಾಲಾ ಅತ್ತಿ ಅಶ್ವಥ|
ಛಲಾ ಮುತ್ತಾದ ಬಸರಿ ಶ್ರೀಗಂಧ ಕೋಲೆ|| ಆಲಾ ಮುತ್ತ

ವ| ೬ಸು ಶ್ರೀಗಂಧ ಸೀಬೇಂವುಕ| ಜ್ಯಾಳ ಸುರವಾ
ರುವ್ರಾಕ್ಷೀಯು ಕೋಲೆ || ೨೩ || ನೆಲ್ಲೆ ತಾರೀ ಆಣಾಲಿ|
ಬಿಲ್ವಾಬೋರೆ ಬೆಳವಾಲು| ಸ್ಫಾಟಿಕ್ಯಾಷೀಲಾವ ಬಾಳೆ ನೆಲ
ಕಬ್ಬು ಕೋಲೆ || ಸ್ಫಾಟಿಲಾ ನೀಲಾವ ಬಾಳೆ ನೆಲು ಕಬ್ಬು
ನಿಂಬಿ ಕೇರು| ಚಲುವಾಜಂಬೀರಾವ ತರುಗಾಳು ಕೋಲೆ
|| ೨೪ || ತಳಿಲೆ ತೋರಣವಾಗಿ| ನೇಳಲೆ ಛಪ್ಪಾರವಾಗಿ|
ಫಲಭಾರದಿಂದಾ ಬಲುಬಾಗಿ ಕೋಲೆ || ಫಲಭಾರದಿಂದಾ
ಬಲುಬಾಗಿ ಹರಿಪಾವ| ಗಳಿಗೆ ಬೀಳ್ವಂತೆ ಶೋಭೀನೆ ಕೋಲೆ
|| ೨೫ || ಕಂಬಿಳಿ ನೈದಲಿ| ಇರವಂತೀಗಿ ಶಾವಂತಿ| ಸರಸೀಜ
ಸೌಗಂಧಿ ಮಲ್ಲಿಗಿ ಕೋಲೆ|| ಸರಸೀಜ ಸೌಗಂಧಿ ಮಲ್ಲೀಗಿ
ಜಾಜಿ ಬಕುಳ ಕುರವಾಕಪುಷ್ಪ ಶೋಭಿಸಿ ಕೋಲೆ || ೨೬ ||
ಸೂಕಾರಂಡಾವು ಚಕ್ರ| ವಾಕಾಸಾರ ಸಾಹಂಸ| 'ಸೂಕೀರ
ಪಾರೀವಾಳಾವು ಊ ೦|| ಸೂಕಿರ ಪಾರೀವಾಳಾವು ಕಾಗೀ
ಗುಬ್ಯಾ| ನೆ.ಕಾಷ್ಲವಗಾವು ಶೋಭಿ ಸಿ ಕೋಲೆ|| ೨೭ || ೨೪೪

|| ಕರಿಪುರವರ್ಣನಯುಧಿಷ್ಟರ ಶಾಸನ ||

ಶ್ರೀಗುರುಭ್ಯೋನಮಃ ಪದ. ರಾಗ. ಸೂರ್ವಿ ತಾಳ ಝಂಪೆ

ಹಸ್ತೀನ ಪುರದ ಸಮಸ್ತ ಶೃಂಗಾರವು| ವಿಸ್ತರಿಸಲು ಆರಿಂದ
ವಶವೊ || ಪಲ್ಲ || ಸುತ್ತಲಿದ್ದಾಗೋಡೀಗೆ | ಸರ್ಪನಹಡಿ
ಯುಂತೆ| ಹತ್ತು ಸಾವಿರ ತೆನಿತೋರುವವೂ || ೧ || ಕೊತ್ತ
ಲಂಗಾಳವು| ನ್ನತ್ತಾಗಿಹವು ಬಲು| ಯತ್ತ ನೋಡಿದರೂ|

ಮಿತಿ ಇಲ್ಲಾ ‖ ೨ ‖ ಹೆಬ್ಬಾಗಿಲೆಂಳು ಯೆಡಬಲ‖ ದಲ್ಲಿ ಪಾಲ
ಕಾರ‖ ಅಬ್ಬರಿಸೋರು ಹೋಗಿ ಬಾಹರಿಗೆ ‖ ೩ ‖ ಹಲವು
ಮಂದಿಗಳೇ ಕಕಾಲಾದೀ ಹೋಗುತೀರೆ ಗಲಿಬೀಲಿ ನೋಡಲು
ಬಲು ಮಿಗಿಲೂ ‖ ೪ ‖ ಪಚ್ಚೇವಳ್ಳಿಲೀಂದ ನಿರ್ಮಿಸಿರೆ
ಕಾಂತೀಯು‖ ಹೆಚ್ಚಾಗಿ ಕಾಣೀಸೆ ಅಗಸಿಯೊಳು ‖ ೫ ‖
ರಾಜಾಬೀದಿಯು ಪೂರ್ಕ್ಷ ಮುಂದತ್ತ ಪೋಗಲು ‖ ಈ
ಜೋಡು ಎಳ್ಳಿಲ್ಲವೆನಿಸುವದು ‖ ೬ ‖ ಸಾಲೂ ಸಾಲಂಗಡಿ
ಗಳು‖ ನೋಡೆ ಪಂದೊಂದೆ‖ ಮೇಲೂ ಮೇಲೆಂದು ಕರಸೂ
ವದೂ ‖ ೭ ‖ ಮೊದಲೆ ಶಾಖಾದಂಗಡಿ ತರುವಾಯದವ
ಸಾವು‖ ಆದಾಂದ ಜವೇಯು ಇಟ್ಟಿಹರು ‖ ೮ ‖ ಕಂಭಾ
ವತಿಸೂರತಿ ಚಂದ್ರಕಾಳೀಯು ಚಿಕ್ಕಿ‖ ಇಂಜಾನ ಕಿರಿದಾದ
ಪೈಠಣಿಯೂ ‖ ೯ ‖ ಕಡ್ಡೀಮೂರಿಗಾ ಘಾಂವಳೀ ಸಣಾನ
ಗೀರೂ‖ ದೊಡ್ಡ ಸಣ ಶಾಮಂತಿನಾಮಧಾರೀ ‖ ೧೦ ‖
ಸಹರೂ ದೂದೀ ಹಳದಿ ಬಿಳಪು ಪೊಪ್ಪಳ‖ ಕುತನಿ‖ ಅಸಿತಾ
ತಾಪ್ತೀ ಸುಳವು ಬುಗಡೀ ಅಂಚು ‖ ೧೧ ‖ ಉತ್ತಮೋತ್ತಮೇಳ
ಲವಂಗ ಕಾಯಿ ತೆಂಗೂ ಕರ್ಪೂರ‖ ಹತ್ತೆಂಟು ನಾಮಿರ ಫಲ
ರಾಶೀ ‖ ೧೨ ‖ ಸಂಣ ಸಂಣೋಣಿಯೊಳು ಪಳಿಂಟಂತಸ್ತು
ಉಳ್ಳ‖ ಉನ್ನತವಾದ ಪ್ರಸಾದವೇನೊ ‖ ೧೩ ‖ ಹೇಗಾಳೆ
ರಿಟ್ಟಾಭರಣಾಗಾಳು ನೋಡಲ್ಕೆ‖ ಕಂಗಾಳೆ ಸಾಲಾವುಯುನಿ
ಸುವದೂ ‖ ೧೪ ‖ ಹಿಂದೆ ಹೇಳಿದೆ ಶೀರಿ ಅಂದಾದ ಕುಪ್ಪಸ
ಭಂಡಾರವೆ ನನ್ನಲ್ಲ್ಯಾ ಕೋಮಲಿಯಾರಾ ‖ ೧೫ ‖ ನೀಲಾ ಮು

ತ್ತು ಮಾಣೀಕ ಮರಕಾತ ಪುಷ್ಯರಾಗ॥ ಮೇಲೂ ಗೋ
ಮೇಧಿ ವಜ್ರಾ ವೈಡೂರ್ಯ॥ ೧೬॥ ಇಂತೂ ನವರತ್ನ ಯು
ಕ್ತಾಲಂಕಾರ ವಿಟ್ಟಿಹಾರು॥ ಸಂತೋಷಾಂಬುಧಿಯೋಳು
ಯೀಸುವರೂ॥ ೧೭॥ ಅತ್ತತ್ತ ನೋಡಲ್ಲಲ್ಲೆ ವಿದ್ವಾಂಸಾರ
ಮುನಿಗಳ॥ ಜತ್ತೀಲೆ ಒಂದೇ ಬೀದಿಯೊಳಗಿಹವೂ॥ ೧೮॥
ಎಲ್ಲೀ ನೋಡಾಲು ಮಧ್ವಶಾಸ್ತ್ರವೇ ಪೇಳುವಾರು॥ ಕಳ್ಳಮಾ
ಯಿಗಳ ನಿಂದಿ ಮಾಡುವರು॥ ೧೯॥ ವೀರಾದಯು ಅದ್ಭುತ
ಹಾಸ್ಯಬೀಭತ್ಸಭಯ॥ಶೃಂಗಾರಾದಿನವರಸ ಬಲ್ಲವರೂ॥೨೦॥
ಎಲ್ಲಿಯ ವೇದ ಘೋಷಯಲ್ಲಿಯು ಮಂಗಳವೇ॥ ಯಲ್ಲಿಯು
ಮದಿವೀ ಮುಂಜಿನಾಮಕರಣಾ॥ ೨೧॥ ಎತ್ತ ನೋಡಲಾ
ನೀಸಾಲೆ ಎತ್ತ ನೋಡೆ ಕುದರೀಸಾಲೆ॥ ಎತ್ತ ನೋಡಲಂದ
ಣೇರಿ ಬಾಹವರೀ॥ ೨೨॥ ಆರಾರಾಮುನಿಯ ಮುಂದೆ ತೇರಿ
ಶೃಂಗರಿಸೀಹವು॥ ವಾರಾಂಗನೆರ ಮನಿಗಳೊಂದು ಬೀದಿ
ಗೆ॥ ೨೩॥ ಸಂಜೀಲಿ ಬೆಳಗೀ ಮಲಗಾರು ಪತಿಸೇವೆಯಲ್ಲಿ
ಪ್ಪಾರು॥ ಬಂಜೇರೆಬೊರೊಬ್ಬರಿಲ್ಲಾವಾ ಊರೊಳಗೆ॥ ೨೪॥
ಪಾಂಡೂ ಸುತಾರ ಸಭೆ ಅನೆಂತು ವರ್ಣಿಸಾಲಿ॥ ಮಂಡಾಲ
ದೊಳಗೆಲ್ಲ ಅಪ್ರತಿಯೂ॥ ೨೫॥ ದ್ವಾರಾ ದ್ವಾರಂಗಾಳಲ್ಲಿ
ವಾಜೀ ಮುಖದಿ ಮುತ್ತು॥ ತೋರೂತ ವೆಂಬಂತೆ ಕಟ್ಟಿ
ಹರೂ॥ ೨೬॥ ರತ್ನಾ ವೆತೆತ್ತಿಸೀವೆ ಚೌಕಟ್ಟಿಗಳಿಗೆಲ್ಲ॥
ಭಿತ್ತಿಗೆ ಚಂದ್ರಕಾಂತಿ ಗ್ಲಾವಗಳೂ॥ ೨೭॥ ಆರೂ ನೋಡ
ಲೂ ರೂಪ ಅವರಂತೆ ತೋರುವದು॥ ಸ್ವಾರಸ್ಯವೇನನಬೇ
ಕಲ್ಲಿ॥ ೨೮॥ ಚೌಕೀಯಲ್ಲೀರೆ ಧರ್ಮ ಭೀಮಾರ್ಜುನಾದೀ

ಗಳು॥ ನಾಕೊದಿಕ್ಕಿಲಿ ಸೇವೆಮಾಡುವಾರು ॥ ೨೯ ॥ ಮುಂ
ದೆನಿಂತು ದೂತರು ಪರಾಕುಯೆಂಬುವಾರು। ನಂದಾದಿಂಚಾ
ಮರ ಬೀಸುವರು ॥ ೩೦ ॥ ಸೊಗಸಿಲಿ ಕಾಷ್ಟಾಧಾರಿಗಳು
ದ್ವಾರಾದಲ್ಲಿ ॥ ಬಗೆ ಬಗೇ ಇಂದೆಸ್ಥಗಳುವರಂತೂ ॥ ೩೧ ॥
ಹರಿಸರ್ವೋತ್ತುಮನೆನ್ನದನ್ಯಥ ಪೇಳ್ವಾರ॥ ಕೊರದೆ ಹಾಕುವೆ
ವೆಂದು ಕೊಗಳುವರೂ ॥ ೩೨ ॥ ಗೋಪಿಚಂದನ ಪಂಚ
ಮುದ್ರೆಯು ಧರಿಸಾದ ॥ ಪಾಪಿಯು ಕೊಲ್ಲುವೆವೆಂಧೊಗಳು
ವರೂ ॥ ೩೩ ॥ ಏಕಾದಶಿಯು ಮಾಡದವರಿಗೆ ಉಣಿಸೂ
ವೆವು॥ ಬೇಕಾದ ಭವಣಿಯೆಂದ್ಹೊಗಳುವರು ॥ ೩೪ ॥ ಅನ್ಯ
ಸ್ತ್ರೀಯರುಗಳ ಕೂಪರಾರ ನಿದ್ದಾರೆ॥ ಕಂಣಕಿತ್ತಿಸುವೆನೆಂಧೊ
ಗಳುವರೂ ॥೩೫॥ ಮಾತಾಪಿತೃಗಳ ಸಂದಾನೆ ಮಾಡಾದವರ॥
ಘಾತಿಸುವೆವುಯೆಂದು ಹೊಗಳುವರೂ ॥ ೩೬ ॥ ಪುರುಷಾರ
ಸೇವೆ ಮಾಡದಂಗಾನೆ ಊರೊಳಗೆ॥ ಇರಸಲ್ಲದೆಂದೂ ಹೊ
ಗಳುವರೂ ॥ ೩೭ ॥ ಸುಳ್ಳ ಕಳ್ಳರಾರನ್ನ ಊರೊಳಗಿದ್ದಾರೆ॥
ಹಲ್ಲ ಕಿತ್ತೀಸುವೆವೆಂಹೊಗಳುವರೂ ॥ ೩೮ ॥ ಪ್ರಾಣೇಶ
ವಿಠ್ಠಲಾನೆ ಪರನೆಂಬೊ ರೆಂಪು॥ ಪಂಚ ಪ್ರಾಣವೆ ನಿಜ
ವೆಂಧೊಗಳುವರೂ ॥ ೩೯ ॥ ೨೮೩ ॥

॥ ಯುಧಿಷ್ಟರ ಕೃತ ಶ್ರೀ ಕೃಷ್ಣ ಸತ್ಕಾರ ॥

ಶ್ರೀ ಗುರುಭ್ಯೋನಮಃ ಪದ. ರಾಗ. ಸೌರಾಷ್ಟ್ರ ತ್ರಿತಾಳೆ ಏಕ

ಹರಿಬಲಕೂಡಿ ಕೊಂಡು ನಿಮ್ಮನೋಡ ಬಂದನೆಂದು। ಚರ
ರೂ ಪಾಂಡವರಿಗೆ ಪೇಳೆ॥ ಹರುಷೋದ್ರೇಕಾಗಿ ಬಹು ಭಕು

ತಿಯಿಂದೆಲ್ಲಾರುವಂ। ದಿರ ಶ್ರಿಂಗಾರಗಳನು ಮಾಡೆ ‖ ೧ ‖ ಫಲ ಕೈಗಳಲ್ಲಿ ಕೊಂಡು। ಪೊಳ ಲೊಳಿದ್ದ ಸರ್ವರುಡು। ಬಲುವೇಗದಿಂದ ಕೂಡಿ ಕೊಂಡೂ। ಜಲಜನಾಭಾ ರುಗ್ಮಿ ಣಿ ಸತ್ಯಭಾಮೆಯರವಾದ। ನಳಿನಕ್ಕೆ ನಮಿಸಾಲು ಬಂದೂ ‖ ೨ ‖ ದ್ರೌಪದಿ ಸೂಭದ್ರಿ ಮುಖ್ಯ। ವಾರು ಪ್ರತ್ತ ಪ್ರತ್ತ್ಯೇಕಾ‖ ಶ್ರೀ ಪರಮಾತ್ಮಗೊಂದಿಸುವರೂ‖ ಆ ಪಾಂಡೂ ವಾರಾ ಭಾಗ್ಯ ನೋಡಲಂದೀಗೆ ಸಪ್ತ। ದ್ವೀಪಾದವಳಗೆಲ್ಲ ಮಿಗಿಲೂ ‖ ೩ ‖ ಬಂದರಾಯರಾ ಋಷಿಗಳ ಸಂತೋಷ ಕೇಳುತಾ। ವಂದಿಸುತಲಿ ಧರ್ಮ ರಾಯಾ ‖ ನಾನೂ ಜನ್ಮ ಕೆ ಸಫಲಾಯಿತು ಧನ್ಯಾದನು। ಎಂದೂ ಸದನಾ ಕೈತಂದೂ ಬ್ಯಾಗಾ ‖ ೪ ‖ ನಾನಾ ಭೋಜ್ಯ ಪದಾರ್ಥ ಆರೋಗಣೆಯಾ ಮಾಡಿಸಿದಾನಂತಾರ ತಾಂಬೂಲವೀಯೆ ‖ ಭಾಸ। ಅತ್ತ ಮೀಸೆ ಚಂದ್ರೂಪಮ ಬೆಳದಿಂಗಳೊಳು ‖ ಪ್ರಾಣೇಶ ವಿಠ್ಠ ಲ ಆವ್ಯಾಲೆ ‖ ೫ ‖ ೨೮೮ ‖

‖ **ರುಗ್ಮಿಣಿ ಸತ್ಯಭಾಮಾ ಸುಭದ್ರಾ ದ್ರೌಪದಿ ಸಂವಾದ** ‖

ಶ್ರೀ ಗುರುಭ್ಯೋನಮಃ ಪದ. ರಾಗ ಕಾನಡಾ ಧರಣಾ। ತಾಳ ಆದಿ

ಭಂಡಿ ಧರಡಿಲಿ ತಂದ। ಪಿಂಡೇದ ಜವಳಿಯ। ಕೊಂಡು ಬನ್ನಿಂದೂ ದರಿಗೆ ಕೋಲೆ ‖ ಕೊಂದೂ ಬನ್ನಿಂದೂ ತರಿ ಸೂತ ಶ್ರೀ ಕೃಷ್ಣ। ಪಾಂಡವರಿಗೆ ಕೊಡುತಿದ ಕೋಲೆ‖ ‖ ೧ ‖ ಉತ್ತಮ ವಸ್ತ್ರಗಳ। ಸತ್ಯಾಭಾಮೇ ರುಗ್ಮಿಣೇ। ಮಿತ್ರೆ ದ್ರೌಪದಿಗೆ ಸೂಭದ್ರೆಯರಿಗೆ‖ ಮಿತ್ರೆ ದ್ರೌಪದಿಗೆ ಸುಭ

ಧ್ರಿಯಳೀಗಿತ್ತು || ಮತ್ತ್ಯಾರಂಥಾಸ್ತ್ಯ ಮಾಳ್ಪರು ಕೋಲೆ
|| ೨ || ನಿಮ್ಮನ ಮೆಚ್ಚಿನಾಲು। ನಿಮ್ಮ ಒಡಹುಟ್ಟಿದವರು।
ಸುಮ್ಮಾನದಿಂದೀ ಸೀರಿಯು ಕೋಲೆ || ಸುಮ್ಮಾನದಿಂದೀ
ಸೀರಿ ಕುಪ್ಪುಸ ತರಿಸಿ ನಮ್ಮ ಕೈಯಿಂದಾ ಕೊಡಿಸೋರು
ಕೋಲೆ || ೩ || ವಾಲೀ ಕೊಪ್ಪುಸು ಕಂಠ | ಮಾಲೀ ಚಿಂತಾ
ಕಪರಡಿ | ತೋಳಬಂದಿಗಿಯೂ ಮುದದಿಂದ ಕೋಲೆ ||
ತೋಳಾಬಂದಿಯೂ ಮುದದಿಂದ ಕೊಡಿಸೋರು || ಆಲಸ್ಯ
ವ್ಯಾಕೆ ಇನ್ನಾರೆ ಕೋಲೆ || ೪ || ಏಳೂದ್ವೀಪದೊಳಾಗೆ |
ಮೇಲಾದ ಸೂ ಮುತ್ತೀನ | ಜಾಳೀಗಿ ದಂಡೀ ಸರ ಮುತ್ತು
ಕೋಲೆ || ಜಾಳೀಗಿದಂಡೀಸರ ಮುತ್ತು ಕೊಡಿಸೋರು । ಕಾ
ಲಾಹರಣ್ಯಾಕೆ ಈವ್ಯಾಲೆ ಕೋಲೆ || ೫ || ನಾವೆಲ್ಲ ನೊಂದೆ
ವೆಂದು | ನೀವೇನು ತಿಳಿಯಬ್ಯಾಡಿ | ಭಾವಾಶುದ್ಧಿಯಲಿ
ಪೇಳ್ವೇವು ಕೋಲೆ || ಭಾವಾಶುದ್ಧಿಯಲಿ ಪೇಳ್ವೇವು ಈ
ವ್ಯಾಲೆ || ನೀವೇನೋ ನಿಮ್ಮ ಹರಿಯೆನೋ ಕೋಲೆ || ೬ ||
ಹರಿಯ ಮನಸಿನ ಮಾತು | ಬರಿದಾಗಬಾರದೆಂದು | ಅರಿಕೀ
ಮಾಡಿದೆವೂ ನಿಮಗೀಗ ಕೋಲೆ|| ನಿಮಗೀಗಈವ್ಯಾಲೆ|| ಸರಿ
ಬಂದ ಹಾಗೆಮಾಡಿರಿ ಕೋಲೆ || ೭ || ನಿಸಿಕಾಲವಲ್ಲಿ
ದಿವ್ಯ| ವಸನಾಭರಣಂಗಳು| ಬಿಸಿಜಾನಾಭ್ಯಾಕೆ ಕೊಡಿಸೂವ
ಕೋಲೆ|| ಬಿಸಿಜಾನಾಭ್ಯಾಕೆ ಕೊಡಿಸೂವಹದನ | ಹೆಂಗಸ
ರಿಂದ ವ್ಯಾಲೆ ತಿಳಿಯಾದ ಕೋಲೆ ||೮|| ತಾ. ವೀಗೆ ಹೋಗು
ತೀವಿ| ನಾವೀಗದ್ರೌಪದಿ। ನೀವೇನೋ ನಿಮ್ಮ ಹರಿಯೆನೋ
ಕೋಲೆ||ನೀವೇನೋ ನಿಮ್ಮಹರಿಯೇನೋಯನುತಾಲಿ। ಕೇವಾ

ಲ ಜರ್ಚಿೀವಾಳಪ್ಪರು ಕೋೀಲೆ || ೯ || ಅಂಗಾವು ಕಪ್ಪೆಂದು|
ಶ್ರಿಂಗಾರ ಕಾಣೆೀ ಸಾನೊ | ತಂಗೀಯಾರೆಂಬೊನಾ ಚೀಕ್ಯಾ
ಕೋೀಲೆ || ·ತಂಗೀಯುರೆಂಬೂ ನಾಚೀಕಿಯೊ ಇಷ್ಟೊಂವು |
ಅಂಗಾಲಾಚುವೆವೂ ತಿಳಿಸೀರಿ ಕೋೀಲೆ ||| ೧೦ || ವಸ್ತ್ರಾಭರ
ಣಾವು ನೋೀಡಿ| ಸತ್ಪಾಪಕ್ಷೀನಾಡಿ| ಮತ್ತೀ ಕಪ್ಪೀನುಅಡ್ಡಾ
ಗೋೀದು ಕೋೀಲೆ || ಮತ್ತೀ ಕಪ್ಪೀನು ಅಡ್ಡಾಗೋೀದೆನಲು
ಸೂಭದ್ರಿ ಉತ್ರಾ ಕೊಡುತಾಳೆ ರುಗ್ಮೀಣೆಗೆ ಕೊಲೆ || ೧೧ ||
ದೇವಾರ ಪತ್ನಿಯುಂದು | ನಾವೀರ ತಾಳೀ ಕೊಂಡೆ| ಕೇವಾಲ
ಭಂಡೀ ಗೊಳಗಾದೆ ಕೋೀಲೆ|| ಕೇವಾಲ ಭಂಡೀ ಗೊಳಗಾವೆ
ಶ್ರೀ ರುಗ್ಮೀಣೆ ನಾವಂದೆ ಮಾತಾ ನಾಡಾಲೆ ಕೋೀಲೆ || ೧೨ ||
ಅಂಣಾನೆ ಇರಲಾಗಿ | ಅನ್ಯ ಪುರುಷಾರ ಬಯಸೀ|| ಬನ್ನಾ
ಒಟ್ಯಾಕೆ ಬರಬೇಕು ಕೋೀಲೆ || ಬನ್ನಾಒಟ್ಯಾಕೆ ಬರಬೇಕೆ
ಶ್ರೀ ರುಗ್ಮೀಣೆ || ನಿನ್ನಾ ಬುದ್ಧೀಗೆ ಯೇನನಬೇಕು ಕೋೀಲೆ
|| ೧೩ || ದೇಶಾಧಿ ಪತಿಯುಂದು | ನಾನೋೀತೆನಲ್ಲಾವೆ। ದೇ
ಸೀಕಿ ಜನರಾ ಅಂಜಿ ಕಿ ಕೋೀಲೆ || ದೇಸೀಕಿಜನರಾ ಅಂಜೀಕಿ
ಲ್ಲವಲೆ ಸಂ | ನ್ಯಾಸೀ ಒಂದೇನು ಬರಲಿಲ್ಲಾ ಕೋೀಲೆ || ೧೪ ||
ಶ್ರೀನಂತ ರಾಯುರ। ಸ್ತೋೀವಾಪ ಕೊಡಿಸಿ। ಶ್ರೀ ವಾಹಂ
ಕಾಳಿ ಪೂಜೀಸಿ ಕೋೀಲೆ || ಶ್ರೀ ವಾಹಂಕಾಳೀ ಪೂಜೀಸಿ ಗಂ
ಡಾನ | ನೇವೀಸಿದ್ಧಿ ಲ್ಲಾಯೆನಗಾರು ಕೋೀಲೆ || ೧೫ || ಯು
ಲ್ಲಾಟ್ಯದವೇನು ಒಬ್ಬ | ನಲ್ಲೀವ ಗತಾಸ ವಾಳ್ಪಿ । ನಲ್ಲಾ
ರೈದು ವಂದೀ ವಲಿಸೀದಿ ನೇನೆ । ಅಲ್ಲಾದೆ ಬಹುಮಂದ್ರಿ
ವಲಿಸೀದಿನೆ ಸೂಭದ್ರಿ। ಯುಲ್ಲಿ ಕಲಿತಿದ್ದೆ ಬಹುವಾತ

ಕೋಲೆ ॥ ೧೬ ॥ ನಿವಾರಾದರು ಸದ್ಭ । ಗವತರು ಚಿಂತಿಲ್ಲ।
ಕೇವಾಲ ಮಂದಮತಿಗಳ ಕೋಲೆ ॥ ಕೇವಾಲ ಮಂದಮತಿ
ಗಳ ವಲಿಸೂವದು। ದೇವೇರಿಗೆನ. ಉಚಿತಲ್ಲ ಕೋಲೆ ॥ ೧೭ ॥
ಮಂದಾರಿ ಗೊಲಿದಾರೆ। ಸಂದೇಹವಿಲ್ಲದಯು। ಸಿಂಧೂ
ಯಂಬುವರು ನಿಮ್ಮಕ್ಕ ಕೋಲೆ ॥ ಸಿಂಧೂಯಂಬುವರೂ
ನಿಮ್ಮಕ್ಕ ಆವಕುಲ ವೇದೂ ತಿಳಿಯದೆ ರಮಿಸೋಳು ಕೋಲೆ
॥ ೧೮ ॥ ಕುಲಹೀನರೆನ್ನ ದಾಲೆ। ಒಲಿದ. ರಕ್ಷಿಸ.ವದು ಬಲು
ಕೀರ್ತಿ ಭುವನವೊಳಗೆಲ್ಲ ಕೋಲೆ॥ ಬಲುಕೀರ್ತಿ ಭುವನ
ದೊಳಗೆಲ್ಲ ಬಡವಾರಿ। ಗೊಲಿದು ಕೆಡಿಸೋದು ಅನ್ಯಾಯ
ಕೋಲೆ ॥ ೧೯ ॥ ಆಡಗೀದ್ಯಾಕೆ ದ್ರೌಪದಿ। ಹುಡಿಗಿ
ಬಾಯಿಲುಂಬುತಿದ್ದಿ। ಬಡ ಬಡ ಹೇಳನ್ಯಾಯವಾವ ಕೋಲೆ ॥
ಬಡ ಬಡ ಹೇಳೆ ನ್ಯಾಯವಾವ ಬಲ್ಲ ಐವ। ರೊಡನೆ ಯಂತಿ
ದ್ದೆ ಅನುದಿನ ಕೋಲೆ ॥ ೨೦ ॥ ದಿನವೊಳಗೈವಾರೋದಿನ
ದೀನ ಕೊಬ್ಬಾರೊ। ಯನಗೆ ತಿಳಿಸುವದೇ ದ್ರೌಪದಿ ಕೋಲೆ॥
ಯನಗೆ ತಿಳಿಸುವದೆ ದ್ರೌಪದಿ ಈ ಮಾತು। ಅನುವಮಾನಾ
ಬಹಳಾ ಮನಸೀಗೆ ಕೋಲೆ ॥ ೨೧ ॥ ಅನುಮಾನ ಬಿಡಿಸ
ಲಿಕ್ಕೆ। ಚಿನಿವಾರರೀರಬೇಕು। ಅನಳೀರಬೇಕು ವರಿಗಲ್ಲು
ಕೋಲೆ ॥ ಅನಳೀರಬೇಕೂ ವರಿಗಲ್ಲಿಷ್ಟಿಲ್ಲಾದರು। ಗ್ಯಾಣಿ
ಯಂತು ಬೀಡಿಸಾಲನು ಮಾನ ಕೋಲೆ ॥ ೨೨ ॥ ದೇವಿಮಾ
ತಾಡೂತೊಂದು। ಝಾಂವು ಆಯಿತು ಸತ್ಯ। ಭಾವೀನೀ
ಯ್ಯಾಕೆ ಮೌನಾವು ಕೋಲೆ ॥ ಭಾಂವಿನೀ ಯ್ಯಾಕೆ ಮೌನೆಂ
ದು ಕಂಣು ಸೊನ್ನಿ। ದೇವೇಶ ಮಾಡೀದ ಮುದದಿಂದ

ಕೋಲೆ || ೨೩ || ಹರಿಯೇ ಬಲವಾದವನೆಂದು | ಕಿರಿನಗಿನ ಗುತಾಲಿ | ಶಿರಿ ಸತ್ಯಭಾಂವೀ ದ್ರೌಪದಿ | ಕೋಲೆ || ಶಿರಿ ಸತ್ಯಭಾವಿದ್ರೌಪದೀ ಗಂಜೂವನು | ಹರಿದಾಸರೆಲ್ಲಾ ಕೇಳೀರಿ ಕೋಲೆ || ೨೪ || ಬೆನ್ನ ತಿಂಡಿಕ್ಯಿದಾರೆ | ಕಾಣು ತುರಿಸೀ ಕೊಂಡಾತೆ| ಚನ್ನೆದ್ರೌಪದಿ ಚೆನಿವಾರ ನ್ಯಾಕೆ ಚನ್ನೆದ್ರೌಪದಿ ಚೆನಿವಾರ ನಳರಿಜ್ಬ/ ನಿನ್ನೇಸು ಮುದಿ ಬೇಕವ್ವ ಕೊಲೆ ||೨೫|| ಅಕ್ಕ ಮಾತಾಡಳೆಂದು/ ಚಿಕ್ಕಾಕಿನ್ಯಸಿಕೊಂಡ್ಯಾ | ಘಕ್ಕಾನೆ ಬಂದೂ ಸ್ಯೆ ಸ್ಯೆಯು ಕೋಲೆ॥ ಘಕ್ಕಾನೆ ಬಂದು ಸ್ಯೆ ಸ್ಯೆಯ್ಯ ಚೆನಿವಾರ| ಜೊಕ್ಕಾ ಬಂಣಕ್ಕೆ ಮೆಚ್ಚ್ಯಾರು ಕೋಲೆ। || ೨೬ || ಮೆಚ್ಚ್ಯಾದಿದ್ದಾರ ಬಹು ರಚ್ಚೀಯು ಮಾಡುವಾರೆ ಹೆಚ್ಚ್ಯಾಗಿ ಸಭಿಗೆಯುಳಿವಾರೆ ಕೋಲೆ || ಹೆಚ್ಚ್ಯಾಗಿ ಸಭಿಗೆ ಯುಳಿವಾರೆ ದ್ರೌಪದಿ। ಮುಚ್ಚಿಕೋ ಇನ್ನ್ಯಾ ಆ ಮಾತು ಕೋಲೆ || ೨೭ || ಗಂಡ ನೆ ೨೦ರಲಾಗಿ | ಗಂಡೂ ಗಚ್ಚೀಯು ಹಾಕಿ | ಗಂಡೀಸಿನಂತೆ ಶಾದಾಲು ಕೋಲೆ॥ ಗಂಡೀಸಿನಂತೆ ಶಾದಾಲು ಹೆಂಗಸೀನ | ಕಂಡಾಸರೆಲ್ಲಾನಗುವಾರು ಕೋಲೆ || ೨೮ || ಪುರುಷಾರಾನೇಯು ಬಿಟ್ಟು | ಪರಪೀಗೆ ಪ್ಯೆಗೊಟ್ಟು ನೆರಮನಿಯುಲ್ಲೀವಾ ಸಾವು ಕೋಲೆ || ನೆರಮನಿಯುಲ್ಲೀವಾ ಸಾವು ಮಾಡೋದು ಹೆಂಗ| ಸರಿಗನುಮಾನಾ ದ್ರೌಪದಿ ಕೋಲೆ || ೨೯ || ಹೆಂಣೇ ಈ ಸಭೆಯೊಳು ಇನ್ನ್ಯಾರ ಬಲ ವಿಲ್ಲ | ಅಂಣಾನ ಸಲಗೀ ಬಹಳಾಗಿಕೋಲೆ || ಅಣ್ಣಾನ ಸ ಲಿಗೀ ಬಹಳಾಗಿ ಸತ್ಯ ಭಾಂವಿ | ಯನ್ನ ಕೂಡಿಂತೂ ನುಡಿ ವೆಲ್ಲ ಕೋಲೆ ॥ ೩೦ ॥

॥ ಶ್ರೀ ಕೃಷ್ಣ ಪಾಂಡುವರ ಸಂವಾದ ॥

ಹೆಂಡಾರ ಪ್ರೇಮ ಕಳುಹ ಕಂಡೂ ಸಂತೋಷದಿಂದ । ಪುಂಡ
ರೀಕಾಕ್ಷ ನಗೆ ಮೊಗ ಕೋಲೆ ॥ ಪುಂಡರೀಕಾಕ್ಷ ನಗೆ
ಮೊಗವಾಗೆ ವೀರ । ಗಂಡಾ ಅರ್ಜುನನೂ ಇಂತೆಂಬ
ಕೋಲೆ ॥ ೩೧ ॥ ಮೀನಾಕ್ಷಿ ದ್ರೌಪದಿಯು । ನೀನೋಡಿ
ನಗುತಿದ್ದಿ । ಏನು ಭ್ರಮಿಸಿದಿಯೋ ಮನದೊಳು ಕೋಲೆ ॥
ಏನು ಭ್ರಮಿಸಿದಿಯೋ ಮನದೊಳು ಕೃಷ್ಣ ಅನು । ಮಾನ
ವಾಗಿದೆ ಯಮಗೀಗ ಕೋಲೆ ॥ ೩೨ ॥ ಜಾರ ಪುರುಷಾರ
ಗೆ ವಿಚಾರಾವೆಲ್ಲಿ ಹಾವಿದೂ । ಮಾರಾನ ಪಿತನು
ನೀವೊಲಾಗಿ ಕೋಲೆ ॥ ಮಾರನಪಿತನು ನೀ ಮೊಲಾಗಿ
ಯನಲು ಕಂ । ಸಾರಿ ಅರ್ಜುನಗೆ ಇಂತೆಂಬ ಕೋಲೆ
॥ ೩೩ ॥ ಪುಂಸತ್ವ ವಿಲ್ಲದವರು । ಸ್ತ್ರೀಸುತ ಮಾನಿಯೆಂದು ।
ಸಂಸಾರವೆಂತೂ ಮಾಳ್ಪರು ಕೋಲೆ ॥ ಸಂಸಾರವೆಂತೂ
ಮಾಳ್ಪರೊಯೆಂದು ಸ್ಮರಿಸಿ । ಮೇಸವ್ಯಸಾಚಿನ ನಗಿಬಂತು
ಕೋಲೆ ॥ ೩೪ ॥ ಎಲ್ಲೀ ಮಸಿವಾರು ಪುಂಸತ್ವ । ವಿಲ್ಲಾದ
ವರೀಗೆ ಊರ್ವೀಶ ನಿಲ್ಲಾದೆ ಖಳರಭಯದಿಂದ ಕೋಲೆ ॥
ನಿಲ್ಲಾದೆ ಖಳರಾಭಯದಿಂದ ಪೋಗಿ ಜಲಧಿ । ಯಲ್ಲೀ ಶೇರು
ವದೆ ಉಚಿತಾವು ಕೋಲೆ ॥ ೩೫ ॥ ಕಾದಿಗೆಲುವಾದೆ ಗುಣ
ಓ । ಘ್ರೋದಾರರೂ ಮತ್ತು ಸುಗುಣ । ಬಾಧಿಸ ಬಂದಾ ವೈರಿ
ಯು ಕೋಲೆ ॥ ಬಾಧಿಸ ಬಂದ ವೈರಿಯು ಮುಂದೆ ನಿಂತು ।
ರೋದಾನ ಮಾಡೂದೂಚಿತಲ್ಲ ಕೋಲೆ ॥ ೩೬ ॥ ಗೂಳೀ

ಯು ಕೂಡ ಕಾದಿ । ಸೋಲಿಸಿದವನೆ ಬಂಟಾ ಮೇಲಾಗಿ ಹೆಂಗಸಿನ ಕೊಂದೂ ಕೋಲೆ ॥ ಮೇಲಾಗಿ ಹೆಂಗಸಿನ ಕೊಂದು ಬದಕೂವವ । ಭೂಲೋಕ ದೊಳಗೆ ಬಲು ಬಂಟ ಕೋಲೆ ॥ ೩೭ ॥ ಅನ್ಯಾಯವೆ ಕಂಡರೆ ಹೆಣ್ಣಾ ದರುಚಿಂತಿಲ್ಲ ಚನ್ನಾಗಿ ಶಿಕ್ಷಿಯುಮಾಡೊದೆ ಕೋಲೆ ॥ ಚನ್ನಾಗಿ ಶಿಕ್ಷಿಯು ಮಾಡೋದೆ ಪುರುಷಾರು । ಹೆಣು ವೇಷಾಗೊದೆ ಬಲುಭಂಡು ಕೋಲೆ ॥ ೩೮ ॥ ಹೊ ಟ್ಟೆಗಾಗೀ ಸ್ತ್ರೀವೇಷಾ । ತೊಟ್ಟರೊಮ್ಮೆ ಚಿಂತಿಲ್ಲ । ಬಿಟ್ಟು ಬಿಡವಲೇ । ಬಲುಭಾರೆ ಕೋಲೆ ॥ ಬಿಟ್ಟು ಬಿಡವಾಲೆ ಬಲು ಭಾರೆ ಹೆಂಣ್ಣಾಗೋದು । ಕೆಟ್ಟ ಕರ್ಮವು ಪುರುಷಾಗೆ ಕೋಲೆ ॥ ೩೯ ॥ ವನತೀಯಾ ವೇಷಾವು ಒಬ್ಬಸೆಯಾದಾ ರೆ ಚಿಂತಿಲ್ಲಿ । ಮುನಿಯೊಳಗೆಲ್ಲಾರು ಸ್ತ್ರೀವೇಷ ಕೋಲೆ ॥ ಮುನಿಯೋಳಗೆಲ್ಲರು ಸ್ತ್ರೀವೇಷ ತಾಳಲು ಕುಂ। ಭಣಿಯೊ ಳಗಾರು ಮೆಚ್ಚಾರು ಕೋಲೆ ॥ ೪೦ ॥ ಆಪಾರಾಗಾಲಿ ಮಂಪ್ರು । ಛೇದಾ ಮಾಡಾ ಬಾರಾದು । ಮೇದಿನಿಯೊಳಗೆ ಬಲುಪಾಪ ಕೋಲೆ ॥ ಮೇದಿನಿಯೊಳಗೆ ಬಲುಪಾಪ ವೆಂಬ ದು ಆದದ್ದಾಯಿತು ಇನ್ನೇನು ಕೋಲೆ ॥ ೪೧ ॥ ಎಡಿಗೆ ಛೇ ದಾವ ಮಾಡಿ । ಬಡಿಸಿದಾವು ಚಿಂತಿಲ್ಲ । ಬಡವು ಪ್ರಾ ಣಾವ ಕೊಳಬಾರದು ಕೋಲೆ ॥ ಬಡದು ಪ್ರಾಣವಾ ಕೊಳಬಾರದೆನಲು ಸ್ವಾಮಿ ಒಡನೇಆಡುವನೂ ಶ್ರೀ ಭೀಮಾ ಕೋಲೆ ॥ ೪೨ ॥ ತಳಿದಾರೆ ಪಾಪೂ ಪ್ರಾಣಾ ಉಳಿ

ಸೀದಾರೆ ಪುಣ್ಯವೊ | ಬಲು ಮಂದಿ ತಿಳಿಯಾವ ನ್ಯಾಯಾವು ಕೋಲೆ ॥ ಬಲು ಮಂದಿ ತಿಳಿಯಾವ ನ್ಯಾಯಾವಬಲ್ಲ ರನ್ನಾ | ಕಳಕರಕಾಯಿವ್ರೂ ಹುಡುಗಾರು ಕೋಲೆ ॥ ೪೩ ॥ ಬಿಟ್ಟೊ ಕೊಡಾವಮಾತೀಗ | ಎಷ್ಟುಸೂಪಸ್ಥಲವಣ । ಎಷ್ಟಾಕಬೇಕೊ ತಿಳಿಯಾದು ಕೋಲೆ ॥ ಎಷ್ಟಾಕ ಬೇಕೋ ತಿಳಿಯಾದು ಬಲ್ಲರೆಪಂ । ಬಿಷ್ಟು ಪೇಳುವದೂ ಯುವತಿಗೆ ಕೋಲೆ ॥ ೪೪ ॥ ಸಿದ್ಧಪಾಡಷ್ಟು ಬಿಟ್ಟು । ಕದ್ದು ತಿಂಬುವರಂತೆ ನಿದ್ಧೀತು ರುಚಿಯ ಅದರೊಳು ಕೋಲೆ ॥ ಎನಿದ್ಧೀತು ರುಚಿಯು ಅವರೋಳು ಕೃಷ್ಣ ನೀ | ಬುದ್ಧೀವಂತನಾದರಿಂದು ಪೇಳು ಕೋಲೆ ॥ ೪೫ ॥ ಅದಕಿಂತ ಬಲು ರುಚಿ | ಮಧುಕಾರ ಪೇವಾರೊ ॥ ಅವು ಪರಿಚಿತಿಯೂ ಉಂಟೇನೊ ಕೋಲೆ ॥ ಅವು ಪರಿಚಿತಿಯು ಉಂಟನೊಬಲ್ಲಾರೆ | ಅದಕೇನು ಚಿಂತಿಪೇಳೀಗ ಕೋಲೆ ॥ ೪೬ ॥ ಒಮ್ಮೆ ಇಲ್ಲೆಂದಾರೆಮು | ತೊತ್ತುವೆಬೇಡುಂಬೂವನು | ಧರ್ಮವಲ್ಲವು ಬಹು ಕಾರ್ಪಣ್ಯ ಕೋಲೆ ॥ ಧರ್ಮವಲ್ಲವು ಬಹು ಕಾರ್ಪಣ್ಯದೋಷ ಮುನಿ | ಸಮ್ಮಾತ ಪಲ್ಲಾವು ಈ ಮಾತು ಕೋಲೆ ॥ ೪೭ ॥ ಭಂಡೀ ತುಂಬನ್ನಬ್ಬಾನೆ | ಉಂಡಾನೇಬೂವರೆಂಥಾ । ದಿಂಡ್ಯಾನಾಥಾನೊ ಅವ ತಿಳಿಯಾದು ಕೋಲೆ ॥ ದಿಂಡ್ಯಾನಾಥಾನೊ ಅವ ತಿಳಿಯಾದು ಎಲ್ಲೆಲ್ಲಿ | ಕಂಡಾ ಮಾತಲ್ಲೀದು ಆಶ್ಚರ್ಯ ಕೋಲೆ ॥ ೪೮ ॥ ಆರಾರಿಗನ್ನತಮ್ಮಾ। ಹಾರಾವಿಷ್ಟಷ್ಟು ಮತ್ತು | ನೂರೂ ಭಂಡೀ

ಉಂಡಾರು ಚಿಂತಿಲ್ಲ ಕೋಲೆ || ಸೂರೂ ಭಂಡೀ ಉಂಡಾರು ಚಿಂತಿಲ್ಲ ಜಗಗೋಳು ಜಾರಾ ಚೋರಾತನವೆ ಬಲುಹೀನ ಕೋಲೆ || ೪೯ || ರಪ್ಪಾಸಿ ಆಸ್ವಾವದು ಕಳ್ಳುಲಾತಿಯು ಮಾತು ತಕ್ಕದ್ದು ಅಲ್ಲ ಸುಜನಾಗೆ ಕೋಲೆ || ತಕ್ಕದ್ದು ಅಲ್ಲಾವು ಸುಜನಾಗೆ ಜನರೆಲ್ಲ । ನಕ್ಕು ಪರಿಹಾಸ್ಯ ಮಾಡೋರು ಕೋಲೆ || ೫೦ || ಪಂಕಾಜ ಮುಖಿ ಅಕ । ಶಂಕಾಕಾದಾರಾಯಿತು| ಶಂಕಾ ಮಾಡುವರೆ ಕುಲಗೋತ್ರ ಕೋಲೆ|| ಶಂಕಾ ಮಾಡುವರೆ ಕುಲಗೋತ್ರ ವ್ಯಾಮುಲ್ಲ ಡೊಂಕಾದ ರೊಂದೆ ಸಲ್ಲಾದು ಕೋಲೆ || ೫೧ || ದೊಡ್ಡವರಾದವಾರು | ಗುಡ್ಡಾಕಿತ್ತುಕುವದು | ಮಡ್ಡಾ ಕೆಲಸವೆ ಅನಜೇಕು ಕೋಲೆ || ಮಡ್ಡಾ ಕೆಲಸವೇ ಅನಜೇಕು ಅವರಸ | ವದ್ದಾರೆಯುಂಮು ತಿಳಿವೋದು ಕೋಲೆ || ೫೨ || ಕಿತ್ತಿದಾರು ಚಿಂತಿಲ್ಲ| ತತ್ತರೀ ಸಾದಾಲೆ || ಹೊತ್ತು ನಿಲ್ಲುವದು ಬಲು ಹೆಚ್ಚು ಕೋಲೆ || ಹೊತ್ತುನಿಲ್ಲುವದೂ ಬಲುಹೆಚ್ಚಾಡ್ಡಾರಕೆಂತ|ಅತ್ತತ್ತಪೆಂದು ತಿಳಿವೋದು ಕೋಲೆ ||೫೩|| ಮುದಿವಿಲ್ಲದವನಗ್ಗ ವಧುಗಾಳನೋಡುವವ| ಹವನಲ್ಲ ಪಾಪ ಕರ್ಮವು ಕೋಲೆ|| ಪದನಲ್ಲಪಾಪಾಕರ್ಮವು ಈ ಮಾತು । ಬುಧಜನರೆಲ್ಲ ಮೆಚ್ಚಾರು ಕೋಲೆ || ೫೪ || ಚನ್ನೀಗದ ಸ್ತ್ರೀರೂಪ । ವನ್ನು ನೋಡಿದ ಮಾತ್ರ | ಸನ್ಯಾಸಿ ರೇತಸ್ಸು ಜಿಗಳಾಲು ಕೋಲೆ || ಸನ್ಯಾಸಿರೇತಃಸ್ಸುಜಿಗಳಾಲುದಿಗ್ಬಲಿ। ಯನ್ನೇಮಾಡಬೇಕೆ ಮುಖುಪಿವಾಕ್ಯಕೋಲೆ|| || ೫೫ || ಶ್ರೀ ಚಕ್ರವರ್ತಿಗಾಳು । ನಾಚಕೀಯುಸು ಪಟ್ಟು

ಆಚಾರ್ಯರಾಗೂವದು ಬಲು ಹೀನ ಕೋಲೆ ॥ ಆಚಾರ್ಯ
ರಾಗುವದು ಬಲುಹೀನ ಅದು ಕೇಳಿ|ಆಚೀಯುರಾಯುರು ನಕ್ಕಾ
ರು ಕೋಲೆ ॥ ೫೬ ॥ ಅರಸೀನವುಕ್ಕಳಾಗಿ । ಧೊರಿತಾನ
ಮಾಡದೆ। ಧರಣೀದೇವತಿಗಾಳಾಳಾಗಿ ಕೋಲೆ ॥ ಧರಣೀ
ದೇವತಿಗಾಳಾಳಾಗಿ ಅವರಕೂಡ। ತಿರಕೀಫೋಗುವದೂ ಮಾ
ನಲ್ಲ ಕೋಲೆ ॥ ೫೭ ॥ ಕುವರೀಗೆ ರೋಗ ಬಂದ। ರದ ರೌಷ
ಧವಾಪ್ರೋಮೊ । ಅದು ಬಲ್ಲ ಜಾಣಾ ಪುರುಷಾನು ಕೋಲೆ ॥
ಅದು ಬಲ್ಲ ಜಾಣಾ ಪುರುಷಾನ, ನಿತ್ಯಾ ನಮ್ಮ । ಬದಿಯಲ್ಲಿ
ರಬೇಕೂ ಸಿಗವಲ್ಲ ಕೋಲೆ ॥ ೫೮ ॥ ಪೂಡವೀಯುಒಳ
ಗಿದ್ದ । ಗಿಡಗಾಳೆಲ್ಲಾವು ಬಲ್ಲ। ಅಡವೀಯ ಗೊಲ್ಲಾರೆ ಇರ
ಲಾಗಿ ಕೋಲೆ ॥ ಅಡವೀಯ ಗೂಲ್ಲಾರೆ ಇರಲಾಗಿ ವೈದ್ಯನ।
ಹುಡುಕೂವದ್ಯಾಕೆ ಸಿಗನೆಂದು ಕೋಲೆ ॥ ೫೯ ॥ ಕೋಟೀವಂಡಿ
ದ್ದಾರು । ತೋಟಾವಾಒಳಗೇವೆ। ಈರಾವಿಲಾದೂ ದಿಕ್ಕಿಲ್ಲ
ಕೋಲೆ ॥ ಈರಾವಿಲಾರೂ ದಿಕ್ಕಿಲ್ಲ ಕೃಷ್ಣ ನಿನ್ನ । ಲಾಠೀ ಅವ
ಲಕ್ಕೀವಾಡೋಣ ಕೋಲೆ ॥ ೬೦ ॥ ಮರುತಾ ನಿಂದಾ
ಡೂವ । ಸರಸಾದ ಮಾತು ಕೇಳಿ । ಖರಿಯಾವಾಗೆ ಬಡಿದಿ
ಯುಪ್ಪಾ ನೀಕೋಲೆ ॥ ಖರಿಯಾವಾಗೆ ಬಡದಿಯುಪ್ಪಾ ನೀನೆಂ
ದು ಶ್ರೀ । ಪರಮಾತ್ಮ ಬಹಳಾ । ನಗುತೀಹ ಕೋಲೆ ॥ ೬೧ ॥
ಅವರಾವರಾಡೊದು। ಇವರೀವ ರಂಬೂವದು। ದಿವಿಜೇಶನಗು
ವದು ನೋಡುತ ಕೋಲೆ ॥ ದಿವಿಜೇಶನಗುವದು ನೋಡುತ
ಧರ್ಮರಾಯ । ಖವಖಾವನಗುತಾನೆ ಸಭೆಯೋಳು ಕೋಲೆ

|| ೬೨ || ಲೋಕೈಕನಾಥಾನು | ಲೋಕಾರೀತಿಯ ಮಾಳ್ಪಾ । ಈ ಕೌತೂಕವಾ ನೋಡಿರೆಲ್ಲಾರು ಕೋಲೆ॥ ಈ ಕೌತೂಕಾವ ನೋಡಿರೆಲ್ಲಾರು ಯಿಂದಾಗ | ನಾಕಾಜನರೆಲ್ಲಾ ನಗುತೀರೆ ಕೋಲೆ || ೬೩ || ಭೀಮಾರ್ಜುನಾರು ಕೂಡಿ। ಸ್ವಾಮೀಯಪಾದ ಯುಗ | ತಾಮರಸಗಳೀಗೆರಗಾಲು ಕೋಲೆ || ತಾಮರಸಗಳೀಗೇರಗಾಲು ಹರುಷು | ಪ್ರೇಮಾ ದಿಂದೆತ್ತಿಅಪ್ಪೀದ ಕೋಲೆ ॥ ೬೪ ॥ ಮುಂದಾಗಮುನಿ ಮುಂಯ್ಯಾ | ತಂದ ಕಾರಣಾ ನಿಮ್ಮ | ನಿಂಮಾ ನೋಡಿದೆ ನೀಗ ಕಂಣ್ಣಾತುಂಬಿ ಕೋಲೆ || ಇಂದೂ ನೋಡಿದೆ ಕಂಣು ತುಂಬೀಗ ತಾಯಿ ತಂದಿ । ಬಂಧೂ ಬಳಗೆಂವಾರೆ ನೀವೆ ೀವೆ ಕೋಲೆ|| ॥ ೬೫ || ಶರಣಾ ವತ್ಸಾಲನೆಂಬೊ । ಬಿರಿದೀಗೆ ತಕ್ಕ ಮಾತು। ಹರಿ ಆಡುತಿರಲು ಕೇಳುತ ಕೋಲೆ ॥ ಹರಿ ಆಡುತಿರಲು ಕೇಳುತ ಪಾಂಡುವರೂ || ಹರುಷಾಬ್ಧಿಯಲ್ಲೀ ಮುಳಗೂತ ಕೋಲೆ || ೬೬ || ಕರವೂ ನೆನಿಸೀಕೊಂಡು | ತುರವೂ ತಾನೆ ಬಂದಂತೆ | ಪರಮಾತ್ಮನೀನೆನೆವಯ ಮಾಡಿ ಕೋಲೆ || ಪರಮಾತ್ಮನೀನೆವೇದಯುಮಾಡಿ ಬಂದ್ಯೆ ಮ್ಮ | ದ್ವರಿಸಿದ್ಯೊಬ್ಯಂದು ತುತಿಸೋರು ಕೋಲೆ ॥ ೬೭ ॥ ಪಾಹೀ ಪಂಕಜನಾಭ । ಪಾಹೀವಾಸವಾನೂಜ | ಪಾಹೀದಯಾಳು ಸರ್ವಜ್ಞ ಕೋಲೆ ॥ ಪಾಹೀದಯಾಳು ಸರ್ವಜ್ಞಸರ್ವೇಶಾ ಪಾಹೀ ಮಾಧಾವಯಂದು | ತುತಿಸೋರು ಕೋಲೆ || ೬೮ || ಶ್ರೀ ಪಾಂಚಾಲೆ ಸೂಭದ್ರಿ । ಮಾಪತಿಗೊಂದೀಸುತ | ಹೇಪರ

ಬ್ರಹ್ಮ ಕರೂಣೀಸೊ ಕೋ(ಲೆ || ಹೇಪರಬ್ರಹ್ಮ ಕರೂಣೀ ಸೊಯುಂದಿಬ್ಬ। ರೂಸಪೆಪದಿಗೇ ತುತಿಸೋರು ಕೋಲೆ || ೬೯ || ಉದ್ಧಾರ ಮಾಡಿದೆಮ್ಮ! ಮಧ್ವಾವಲ್ಲಾಭಪಾದ। ಪದ್ಮದರುಶನವು ಇಂದಿತ್ತು ಕೋಲೆ || ಪದ್ಮ ದರುಶನವೂ ಇಂದೀತ್ತು ಯನುತಾಲಿ ಬುದ್ಧೀ ಪೂರ್ವಕದೀ ಪೊಗಳೊರು ಕೋಲೆ || ೭೦ || ಜಯುತೂ ಜಗತ್ಪಾಲ। ಜಯುತೂ ಜನಾರ್ದನ | ಜಯುತೂ ಮಂಗಾಳ ಮೂರ್ತಿ ಜಯು ಪುಣ್ಯ ಕೀರ್ತಿ || ಜಯುತೂ ಮಂಗಾಳಾ ಮೂರ್ತೆ ಜಯು ಪುಣ್ಯಾ ಕೀರ್ತೆಂದು ವಿ | ನಯದಿಂದ ಬಹಳಾ। ತುತಿನೋರು ಕೋಲೆ || ೭೧ || ನೀನೇ ಸರ್ವ ಸ್ವತಂತ್ರ ನೀನೆ ತ್ರಿಜಗದ್ವ್ಯಾಪ್ತ। ನೀನೆ ತ್ರಿಜಗದ್ಭಿನ್ನ | ಬಲ ಪೂರ್ಣ ಕೋಲೆ || ನೀನೆ ತ್ರಿಜಗದ್ಭಿನ್ನ ಬಲಪೂರ್ಣ ನಿರ್ಲಯು | ಪ್ರಾಣೇಶ ವಿಠಲಾಯುನಲಾಗಿ ಕೋಲೆ || ೭೨ || ೩೬೦ || ಶ್ರೀ ಮಧ್ವೇಶ ಕೃಷ್ಣಾರ್ಪಣ-

|| ಶ್ರೀಕೃಷ್ಣಕೃತ ಭೀಮಸೇನ ದ್ರೌಪದಿ ಭಕ್ತಿ ವರ್ಣನೆ ||

ಶ್ರೀ ಗುರುಭ್ಯೋನಮಃ ರಾಗ, ಶಂಕರಾಭರಣ ತಾಳ ಆದಿ

ಪಂಚಾಲೆ ನುಡಿಗೆ ವೀ | ರಂಚೀಪಿತಾನು ಮೆಚ್ಚಿ! ವಂಚನಿಲ್ಲದಲೆ ನುಡಿವಾನು ಕೋಲೆ || ಪಂಚನಿಲ್ಲದಲೆ ನುಡಿವ ಶುಭವಾಕ್ಯವಾ | ಮುಂಜೆ ಪೇಳುವೆನು ಕೇಳೀರೆಲ್ಲ ಕೋಲೆ || ೧ || ಏನನ್ನಾಲೆ ದ್ರೌಪದಿ ಈ ನಾರೀಯರಾರಾ ಮುಂಯ್ಯಾ ಕಾಣಿಸಿತವ್ವಾ ನಿಮ್ಮ ನಿಂದೂ ಕೋಲೆ|| ಕಾಣೀಸಿತವ್ವಾನಿಮ್ಮ ನಿಂದೂ ಮರಳೆ ಶ್ರೀ | ಶ್ರೀನಿವಾಸಾನೂ ಆಡೂತಿಹ ಕೋಲೆ

‖ ೨ ‖ ನೀನು ನಿನ ಗಂಡಾ ನಿಲ್ಲ। ದಾ ನೀರಲಾರೆನವ್ವಾ। ಪ್ರಾಣೇಗಳ್ಲಿೀ ಜಡವಲ್ಲಿ ಕೋಲೆ ‖ ಪ್ರಾಣೀಗಾಳಲ್ಲೀ ಜಡ ದಲ್ಲಿ ಹೇತಂಗಿ ಇಗೇ । ನಂದೆನುಪಚಾರಲ್ಲವವ್ವಾ ಕೋಲೆ ‖ ೩ ‖ ಶಂಭು ಸೂರೀಶ ಸೋವಾ । ಕೆಂಪೊರೆಲ್ಲಾರೆನ್ನಲ್ಲಿ ಡಂಭಾಕಭಕುತೀ ಮಾಡುವಾಪು ಕೋಲೆ ‖ ಡಂಭಾಕಭಕು ತೀ ಮಾಡೋರು। ನಿನ ಗಂಡಾ ನೀನು। ನಂಬೀಮಾಡು ಏರೆ ನಿಜಭಕ್ತೀಕೋಲೆ‖ ೪ ‖ ಪ್ರಥಮಂಗಾರೆಂಬೊ ನಾಮಾ। ಇತರಾರಿಗಿಲ್ಲಾ ಕಂಡ್ಯಾ। ದಿತಿಜಾರೀಗಳೊಳೂ ನೋಡಲ್ಕೆ ಕೋಲೆ ‖ ದಿತಿಜಾರೀಗಳೊಳು ನೋಡಲ್ಕೆ ಈ ಮಾತು ಮಾರತ ಗೆಪ್ಪುವಮೂ ಶೃತಿಶಿದ್ಧಾ ಕೋಲೆ ‖೫‖ ಶುದ್ಧಾ ಭಾಗವತಾರನ್ನಾ। ಶುದ್ಧಾಭಾಗೀರ್ಥಿ ಉದಕಾ। ಶುದ್ಧಾ ಹರೀತೀರ್ಥಾ ಹರೀದೀನ ಕೋಲೆ ‖ ಶುದ್ಧಾ ಹರಿತೀರ್ಥ ಹರಿ ದೀನ ನಿಮ್ಮನಕ್ಕೆ। ಬುದ್ಧೀಪೂರ್ವಕದೀ ಬಂದೆ ನೀಗಾ ಕೋಲೆ ‖ ೬ ‖ ದೇವರೆಂದು ಲೋಕಕ್ಕೆ ನೀವೇ ತಿಳಿಸೀದಿ ರೆನ್ನ। ಈ ವೀಬುಧರೊಳು ಒಬ್ಬರಿಲ್ಲಾ ಕೋಲೆ ‖ ಈ ವೀಬು ಧರೋಳು ಒಬ್ಬರಿಲ್ಲ ಹೇತಂಗಿ। ಈ ಉಪಕಾರಾ ಕೊಳಗಾದೆ ಕೋಲೆ ‖ ೭ ‖ ದಾನಪಾದ್ರೀ ಧೀಧೂರ। ಪ್ರಾಣೇಶ ಪತ್ಮ ಲೀರ। ಮಾನೀನಿ ಯೊಡನೆ ಹಿತ ಮಾತು ಕೋಲೆ ‖ ಮಾನೀನಿಯೊಡನೆ ಹಿತಾಮಾತು ಗಳಾಡೂತ। ಮಾನಾ ವಾರಂತೆ ಮೋಹೀಸೂವ ಕೋಲೆ ‖ ೮ ‖ ೩೬೮ ‖

॥ ಪಾಂಡವ ಕೃತಶ್ರೀಕೃಷ್ಣ ಮರ್ಯಾದಾ ॥

ಶ್ರೀ ಗುರುಭ್ಯೋನಮಃ ಪದ. ರಾಗ. ಶಂಕರಾಭರಣ ತಾಳ ಝಂಪೆ

ಹರಿದಾಸರೆಲ್ಲರೀ ಕಥೆ ಕೇಳೀ । ಹರಿಪುರದೊಳು ಬಹುಕಾಲ ಬಾಳೀ । ಹರಿದಾಸರೆಲ್ಲರೀ ಕಥೆ ಕೇಳಿ ॥ ಪಲ್ಲ ॥ ಪಾಂಡೂವರೆಲ್ಲ ತಮ್ಮ ಹೆಂಡಾರೆಂದೊಡಗೂಡಿ ॥ ಅಂಡಜವಹನಗೆ । ಮುಂಡೇಬಾಗೀ ॥ ೧ ॥ ವಂದೀಸಿ ಉಡುಗೊರೆ । ತಂದೂ ಕೊಡುವರಾಗ ॥ ಬಂದಾರೆಲ್ಲ ಯದುರಿಗಾ । ನಂದದಿಂದಾ ॥ ೨ ॥ ರುಕ್ಮೀಣೀದೇವಿಗೆ । ಮುಕ್ತಾಪೇಳೆ ಮುಂಡಿಗೆ ॥ ತಕ್ಕ ತಕ್ಕವೀವಾರೂ । ಚೊಕ್ಕ ಶೀರಿಯೂ ॥ ೩ ॥ ಹದಿನಾರು ಸಾವಿರ । ಸುದತೇರಿ ಗಂಬಾರ । ವದಗೀಸಿ ಕೊಡುವರು ॥ ಮುದದಿಂದಾ ॥ ೪ ॥ ನಾರೀಯರಾರಾ ಮುಕ್ತ್ಯಾಳ । ನಾರಾಯಣ ಸಂಭೋಗ । ಪಾರಾವ ಂದೀಗೀವಾರು । ಚಾರುವಸನಾ ॥ ೫ ॥ ದುರಿತಾರಿ ಕೂಡ ಬಂದ । ಪರೂವ ವಿವ್ಯಾಸರೀಗೆ । ತ್ವರದಿಂದೀವಾರು ಪರಿ ಪರೀ ಚೈಲಾ ॥ ೬ ॥ ಪಾಂಡೂವರಿಂದ ಬೀಳು । ಕೊಂಡು ಪ್ರಾಣೇ ವಿಠ್ಠಲಾ । ಶುಂಡಾಪುರದಿಂದ । ತೆರಳಿದನೂ ॥ ೭ ॥ ೩೭೫ ॥ ಶ್ರೀ ಮಧ್ವೇಶಕೃಷ್ಣಾರ್ಪಣ ಮಸ್ತು ॥

॥ ಶ್ರೀಕೃಷ್ಣದ್ವಾರಕಾ ಪ್ರವೇಶ, ಮತ್ತು ॥ ಫಲಶ್ರುತಿ ಮಂಗಳ

ಶ್ರೀಗುರುಭ್ಯೋನಮಃ ಪದ. ರಾಗ. ಸಾವೇರಿತಾಳ ಆದಿ.

ಯೋಸೂ ಭಾರೀಗೆ ಇದೇ ಕೇಳೀರೊ । ನಿವ್ಮಾ । ಯಾಸಾ ಭವರೋಗಾವು ಕೀಳಿರೋ ॥ ಪಲ್ಲ ॥ ದ್ವಾರಕಾ ಪುರ ಹರಿ

ಶೀರಿದಾನಂತರಾದಿ | ನಾರೀಜಾ ಸಾನ ಮುಖ್ಯದಿ ವಿಜಾ ಡೂ ‖ ನಾರಾಯಣಾ ನಂಘ್ರೀಗೆ ಭಾರೀ ಭಾರೇ ವಂದೀಸಿ ‖ ಸಾರೀದರು ತಮ್ಮಯಾ ನಿಜಪೂರಾ ‖ ೧ ‖ ಗೆದ್ದನೇ ರುಗ್ಮೀ ಣಿ | ಗೆದ್ದನೆಲಿ ಸತ್ಯಭಾಂವಿ | ಗೆದ್ದನೆ ಜಾಂಬವತೀ ನೀಲಾಭದ್ರೀ‖ ಗೆದ್ದ್ಯಾ ಲಕ್ಷ್ಮಣ ಮಿತ್ರಿ ಗೆದ್ದ್ಯಾ ಕಾಳಿಂದೇದು ಭೂ। ಮೋದ್ಧಾರ ನಗುತೀಹಾವಿನಯದಿಂದ ‖ ೨ ‖ ಉಡ ಲುಂಟು ಉಣಲುಂಟು | ಕೊಡಲುಂಟು ಕೊಳಲುಂಟು | ದೃಡಗಾತ್ರ ಪ್ರಜಾವೃದ್ಧೀಧನ ವೃದ್ಧೀ ‖ ಪೊಡವೀಯೊಳು ಸತ್ಕೀರ್ತೀ | ಪಡದು ಜೀವೀಸುವಾರು | ಕಡಲ ಶೈಸನಾಕಥೆ ಕೇಳಲೂ ‖ ೩ ‖ ಏಸೊ ಹರಟೀಯುಲಿಕಿ | ನಾಶ ಪುರದೊ ಳಗೆ। ವಾಸವಾಗಬ್ಯಾಡಿ ರೊ ನರರಾಗೀ ‖ ಬ್ಯಾಸಾರದಲೆ ಪ್ರತಿ | ವಾಸಾರದಲ್ಲಿ ಶ್ರೀ ಪ್ರಾ | ಣೇಶಪಠಲಾನ ಕಥೆ ಕೇಳಿ ರೋ ‖ ೪ ‖ ಮಂಗಳ ಮೀನಕೂರ್ಮ ಮಂಗಳ ಕ್ರೋಡ ನರಸಿಂಹಾ ಮಂಗಳ ವಟುರಾಮಾ ರಾಮ ಕೃಷ್ಣಾ ‖ ಮಂಗಳ ಬುದ್ಧ ಧುರ್ಯವಾಹ ಕಲಿವೀದಾರಣಾ ‖ ಮಂಗಳ ಶ್ರೀ ಪ್ರಾಣೇಶವಿಠಲಾ ‖ ೫ ‖ ೩೮೦ ‖ ಶ್ರೀ ಮಧ್ವೇಶಕೃ ಷ್ಣಾರ್ಪಣ ಮಸ್ತು‖

ದಾಸಾರ್ಯ್ಯರು ಈ ಮುಯ್ಯದ ಪದವನ್ನು ಸ್ವಹಸ್ತ ಲೇಖನದಿಂದ ಶ್ರೀದೇವರಿಗೆ ಅರ್ಪಿಸಿದ್ದು

ಅಂತು ಪದ (೩೮೦) ವಿಭವ ನಾಮ ಸಂತ್ಸರವಸಂತ ಋತು ಚೈತ್ರಬ ॥ ೪ ಗುರುವಾಸರದಲ್ಲಿ ಶ್ರೀ ವರದೇಂದ್ರ ರಾಯರ ಸಮೀಪ ಮಠದೊಳಗೆ ಶ್ರೀ ಮಧ್ವಜಗನ್ನಾಥದಾಸ ರಾಯರ ಪಾದಾಂಬುರು ಹಾಳಿಯನಿಸುವನಿಂದ ಈ ಮು ನ್ನೂರಾ ಯಂಭತ್ತು ಪದ್ಯ ಉಳ್ಳಂಥ ಮುಯ್ಯದ ಕಥೆ ಪದ ವನ್ನು ಶ್ರೀಗಳವರಂತರ್ಯಾಮಿ ಶ್ರೀ ಮಧ್ವನುಮ ಭೀಮ ಮಧ್ವಾಂತರ್ಯಾಮಿ ಶ್ರೀ ರಾಮಕೃಷ್ಣ ವೇದವ್ಯಾಸರು ಅನು ಗ್ರಹಪೂರ್ಣಮಾಡಿ ಬರದು ಬರಸಿದ್ದಾರೆಂಬ ಕಾವ್ಯವು ಶ್ರೀ ಮಧ್ವೇಶಾರ್ಪಣ ಮಸ್ತು ॥ ಶಕೆ (೧೭೩೦)

